theTahsildar that the lorry was going toSouth Kanara District situated adjacent to the district board. Further action is being taken by the Deputy Commissioner under Section 6A of the Essential Commodities Act.

Sri S. M. SHEERNALY CHANDRASEKHAR.—My question has not been answered.

MADAM SPEAKER.—The hon. member with now resume his seat. Now the Hon. Minister for Agriculture will reply to the Debate.

BUDGET ESTIMATES FOR 1975-76

Demands for Grants

[DEMAND NO : 38, 41, 44 AND 45]

(Debate Continued)

† ಶ್ರೀ ಎನ್. ಚಿಕ್ಕೇಗೌಡ.—(ವ್ಯವಸಾಯ ಮತ್ತು ಪಶುಸಂಗೋಪನಾ ಸಚಿವರು)

ಸನ್ಮಾನ್ಯ ಸಭಾಧ್ಯಕ್ಷಿಣಿಯವರೆ, ನಿನ್ನೆಯ ದಿವಸ ಮತ್ತು ಇವತ್ತಿನ ದಿವಸ ಈ ಮನೆಯ 10 ಜನ ಮಾನ್ಯ ಸದಸ್ಯರು ವ್ಯವಸಾಯ, ಪಶುಸಂಗೋಪನೆ, ಹೈನುಗಾರಿಕೆ ಮತ್ತು ಅದಕ್ಕೆ ಸಂಬಂಧಪಟ್ಟಂತೆ ಇನ್ನೂ ಅನೇಕ ವಿಚಾರಗಳಲ್ಲಿ ನಮ್ಮ ಇಲಾಖೆಗಳು ಮಾಡಿರತಕ್ಕ ಕೆಲಸಗಳ ಬಗ್ಗೆ ಮತ್ತು ಅಭಿವೃದ್ಧಿಯ ಬಗ್ಗೆ ಏನೊಂದು ಮಹತ್ತರವಾದ ಸಲಹೆಗಳನ್ನು ಕೊಟ್ಟಿದ್ದಾರೆ ಅವುಗಳನ್ನು ಬಹಳ ಎಚ್ಚರಿಕೆಯಿಂದ ಕೇಳಿ ತಿಳಿದುಕೊಂಡಿದ್ದೇನೆ. ಎಲ್ಲಕ್ಕಿಂತಲೂ ಬಹಳ ಮುಖ್ಯವಾಗಿ ನಮ್ಮ ದೇಶ ವ್ಯವಸಾಯ ಪ್ರಧಾನವಾದ ದೇಶ. ನೂರಕ್ಕೆ 75 ಜನ ವ್ಯವಸಾಯಗಾರರಿದ್ದಾರೆ. ಭಾರತ ದೇಶ ವ್ಯವಸಾಯದಿಂದ ಕೂಡಿನಂಥ ದೇಶವಾಗಿರುವುದರಿಂದ ವ್ಯವಸಾಯ ಪ್ರಗತಿ ಮತ್ತು ಉತ್ಪಾದನೆ ಅಭಿವೃದ್ಧಿ ಆಗಬೇಕಾಗಿದ್ದರೆ ಅದು ಆರ್ಥಿಕ ಪ್ರಗತಿಯನ್ನು ಅವಲಂಬಿಸಿದೆ ಎನ್ನುವ ಮಾತನ್ನು ಎಲ್ಲ ಮಾನ್ಯ ಸದಸ್ಯರೂ ಒತ್ತಿ ಹೇಳಿದ್ದಾರೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳೂ ಸಹ ಅಷ್ಟೇ ಆಸಕ್ತಿಯಿಂದ ಈ ಇಲಾಖೆಯ ಪ್ರಗತಿ ಮತ್ತು ಜನತೆಯ ಪ್ರಗತಿಗೆ ಸಾಕಾದಷ್ಟು ಯೋಜನೆಗಳನ್ನು ಹಾಕಿಕೊಂಡು ಅವುಗಳನ್ನು ಕಾರ್ಯಗತ ಮಾಡುತ್ತಿದ್ದೇವೆ. ಕಳೆದ ವರ್ಷ ವ್ಯವಸಾಯ, ಪಶುಸಂಗೋಪನೆ, ಹೈನುಗಾರಿಕೆ ಇಲಾಖೆಗಳಿಗೆ ಸಂಬಂಧಪಟ್ಟ ಬೇಡಿಕೆಗಳನ್ನು ಇಟ್ಟಂಥ ಕಾಲದಲ್ಲಿ ಗೊಬ್ಬರದ ವಿತರಣೆ ಬಗ್ಗೆ ಹೇಳಿದ್ದರು. ಕಳೆದ ವರ್ಷ ಹಿಂಗಾರು, ಮುಂಗಾರು ಬೆಳೆಗಳನ್ನು ಬೆಳೆಯತಕ್ಕ ಕಾಲದಲ್ಲಿ ಆ ವಿಚಾರದಲ್ಲಿ ಅತ್ಯಗತ್ಯವಾಗಿ ಬೇಕಾಗಿದ್ದಂಥ ಕೃತಕ ಗೊಬ್ಬರದ ಸಮಸ್ಯೆ ಹಾಗೂ ಇನ್ನೂ ಇತರ ಸಮಸ್ಯೆಗಳನ್ನು ವಿವರವಾಗಿ ಹೇಳಿದ್ದರು. ಈ ವರ್ಷ ಪ್ರತಿಯೊಬ್ಬ ರೈತರೂ ಕೂಡ ಈ ಗೊಬ್ಬರದ ಹಂಚಿಕೆಯ ವ್ಯವಸ್ಥೆಯ ಬಗ್ಗೆ ಸಮಾಧಾನ ಪಟ್ಟುಕೊಂಡಿರುವುದು ಬಹಳ ಮುಖ್ಯವಾದುದು. ಸರ್ಕಾರದವರೂ ಕೂಡ ಈ ಗೊಬ್ಬರದ ವಿತರಣೆಯಲ್ಲಿ ಆಗಿರತಕ್ಕಂಥ ನ್ಯೂನತೆಗಳನ್ನೂ ತೆಗೆದುಹಾಕಿ ಇಡೀ ದೇಶದಲ್ಲಿಯೇ ಎಲ್ಲೂ ಕೂಡ ಮಾಡದೇ ಇರುವಂತಹ ಅಭಿವೃದ್ಧಿಯನ್ನು ಮಾಡಿದೆಯೆಂದು ಸ್ಪಷ್ಟವಾಗಿ ಹೆಮ್ಮೆಯಿಂದ ಈ ಮಾತನ್ನು ಹೇಳಬೇಕಾಗಿದೆ. ಕಾರಣವಾದರೂ ಇಷ್ಟೇ ; ನಮ್ಮ ವ್ಯವಸಾಯಗಾರರಿಗೆ ಸಕಾಲಕ್ಕೆ ಬೇಕಾದಂಥ ಬೀಜ, ಗೊಬ್ಬರ, ಮತ್ತಿತರೇ ಕ್ರಿಮಿನಾಶಕ ಔಷಧಿಗಳನ್ನು ಒದಗಿಸುವುದು ಬಹಳ ಮುಖ್ಯವಾದುದು. ಕಳೆದ ವರ್ಷ ನಮ್ಮ ರಾಜ್ಯದ ಕೆಲವು ಭಾಗಗಳಲ್ಲಿ ಅಂದರೆ ಹಾಸನ, ಮಂಡ್ಯ, ಚಿತ್ರದುರ್ಗ, ಬಳ್ಳಾರಿ, ಇತ್ಯಾದಿ ಭಾಗಗಳಲ್ಲಿ ಮುಂಗಾರು ಮಳೆ ಸಕಾಲದಲ್ಲಿ ಬಾರದೇ ಹೋದುದರಿಂದ, ಬಹಳ ತೊಂದರೆಯಾಗಿ ಉತ್ಪಾದನೆಯಲ್ಲಿ ನಾವು ಏನು ಗುರಿಯನ್ನು ಇಟ್ಟುಕೊಂಡಿದ್ದೆವೋ ಆ ಗುರಿಯನ್ನು ನಾವು ಮುಟ್ಟುವುದಕ್ಕೆ ಸಾಧ್ಯವಾಗಲಿಲ್ಲ. ಕಳೆದ ವರ್ಷ ಅಂದರೆ 1973-74 ರಲ್ಲಿ 61.53 ಲಕ್ಷ ಟನ್‌ಗಳಷ್ಟು ಆಹಾರ ಮತ್ತಿತರೇ ಧಾನ್ಯಗಳನ್ನು ಉತ್ಪಾದನೆ ಮಾಡಬೇಕೆಂದು ಏನು ಗುರಿಯನ್ನು ಇಟ್ಟುಕೊಂಡಿದ್ದೆವು ಆ ಗುರಿಯನ್ನು ಮುಟ್ಟಲು ಸಾಧ್ಯವಾಯಿತು. 1974-75ರಲ್ಲಿ 64 ಲಕ್ಷ ಟನ್ ಆಹಾರ ಧಾನ್ಯಗಳನ್ನು ಉತ್ಪಾದನೆ ಮಾಡಬೇಕೆಂಬ ಗುರಿಯನ್ನು ಇಟ್ಟುಕೊಂಡಿದ್ದೆವು. ಈಗಾಗಲೇ ಹೇಳಿದಂತೆ

ಕೆಲವು ಜಿಲ್ಲೆಗಳಲ್ಲಿ ಸಕಾಲದಲ್ಲಿ ಮಳೆ ಬಾರದೇ ಮುಂಗಾರು ಬೆಳೆಯಲ್ಲಿ ಸ್ವಲ್ಪ ಕುಂಠಿತವಾಯಿತು. ಆದರೂ ಸಹ ಕಳೆದವರ್ಷ ಸೆಪ್ಟೆಂಬರ್, ಅಕ್ಟೋಬರ್ ತಿಂಗಳುಗಳಲ್ಲಿ ಮಳೆ ಸ್ವಲ್ಪ ಹೆಚ್ಚಾಗಿ ಬಂದುದರಿಂದ ರಾಬಿ ಮತ್ತು ಸಮ್ಮರ್ ಕ್ರಾಪ್ ಬೆಳೆಗೆ ಬಹಳ ಅನುಕೂಲವಾಗಿದೆ. ಆದುದರಿಂದ ಈಗ ನಾವು ಏನು 64 ಲಕ್ಷಟನ್ ಆಹಾರಧಾನ್ಯಗಳ ಉತ್ಪಾದನೆಯನ್ನು ಮಾಡಬೇಕೆಂದು ಗುರಿಯನ್ನು ಇಟ್ಟುಕೊಂಡಿದ್ದೇವೆ ಆ ಗುರಿಯನ್ನು ಮುಟ್ಟುವ ಯೋಜನೆಗಳನ್ನು ಈಗಾಗಲೇ ಹಾಕಿಕೊಂಡಿದ್ದೇವೆ. ಮುಂದಿನ ವರ್ಷ ಅಂದರೆ 1975-76ರಲ್ಲಿ 66.70 ಲಕ್ಷಟನ್‌ಗಳಷ್ಟು ಆಹಾರೋತ್ಪಾದನೆಯನ್ನು ಮಾಡುವ ಗುರಿಯನ್ನು ಇಟ್ಟುಕೊಂಡಿದ್ದೇವೆ. ಮುಖ್ಯವಾಗಿ ಈ ಗುರಿಯನ್ನು ಮುಟ್ಟಬೇಕಾದರೆ ಪ್ರತಿಯೊಂದು ಎಕರೆಯಲ್ಲೂ ಹೆಚ್ಚು ಇಳುವರಿ ಬರುವುದು ಎಂದು ನಾವು ಇಟ್ಟುಕೊಂಡಿರತಕ್ಕ ಗುರಿ 5ನೇ ಪಂಚವಾರ್ಷಿಕ ಯೋಜನೆಯ ಅಂತ್ಯದೊಳಗಾಗಿ ಅಂದರೆ 1978-79ರ ಹೊತ್ತಿಗೆ 75ಲಕ್ಷಟನ್ ಆಹಾರೋತ್ಪಾದನೆಯನ್ನು ಮಾಡಬೇಕೆಂದು ಗುರಿಯನ್ನು ಇಟ್ಟುಕೊಂಡಿದ್ದೇವೆ. ಈ ಮನೆಯ ಮಾನ್ಯ ಸದಸ್ಯರಾದಂಥ ಶ್ರೀಮಾನ್ ಬಂಗಾರಪ್ಪನವರು ನಮ್ಮ ರಾಜ್ಯದಲ್ಲಿರತಕ್ಕ ಹಿಡುವಳಿ ಬಗ್ಗೆ ಮತ್ತಿತರ ಸಣ್ಣಹಿಡುವಳಿದಾರರಿಗೆ ರಾಜ್ಯಸರ್ಕಾರ ಮತ್ತು ವ್ಯವಸಾಯ ಇಲಾಖೆ ಏನೂ ಮಾಡಿಲ್ಲವೆಂದು ಹೇಳಿದರು. ಯಾವ ಯಾವ ವರ್ಗದ ಜನ ಎಷ್ಟೆಷ್ಟು ಜಮೀನನ್ನು ಇಟ್ಟುಕೊಂಡಿದ್ದಾರೆ ಎಂಬ ಬಗ್ಗೆ ಅಂಕಿ ಸಂಖ್ಯೆಗಳನ್ನು ಈ ಸದನದ ಗಮನಕ್ಕೆ ತರಬಯಸುತ್ತೇನೆ.

Land Utilisation in Karnataka during 1971-72.

Total geographical area	—	190.46	lakh acres.
Forest	—	28.95	do
Net available for cultivation			
(a) Barren & uncultivable land.		8.62	do
(b) Land put to non-agricultural use.		9.68	do
Other uncultivable land excluding fallow land.		15.92	do
Land under Miscellaneous trees & groves not included in net area sown.		3.11	do
Cultivable waste.		5.93	do
Fallow land (other than current fallow).		6.44	do
Current fallow.		8.50	
Net area sown.		103.31	do (54.2% of total geographical area)
Area sown more than once.		6.57	
Total cropped area.		109.88	do

Then number of land holdings :—

Number of holdings below 0.5 Hectar 5.27. area covered-1.30, percentage of holdings-14.7, Percentage of coverage-1.15.

Number of holdings from 0.5 to 1 Hectare-5.54, area covered 4.12, percentage of holdings-15, percentage of coverage-3.5

Number of holdings from 1 to 2 Hectare, the percentage of coverage is 10.6%.

Number of holdings from 2 to 3 acres, the percentage of coverage is 10.5%.

Number of holdings from 3 to 4 acres, the percentage of coverage is 9%.

Number of holdings from 4 to 5 acres, the percentage of coverage is 8.8%.

Number of holdings from 5 to 10 acres, the percentage of coverage is 26%.

Number of holdings from 10 to 20 acres, the percentage of coverage is 20.8%.

Number of holdings from 20 t0 30 acres, the percentage of coverage is 6.4%

Number of holdings from 30 to 40 acres, the percentage of coverage is 2.5%.

Number of holdings from 40 to 50 acres, the percentage of coverage is 0.9%.

Number of holdings from 50 and above acres, the percentage of coverage is 1 3%.

Area irrigated under defferent source of water :

Medium and Major Irrigation. 6.22 hectares. 5.7% of sown area (Approx).

Minor Irrigation. 7.36 lakh hectares. -6.8% (Approx).

Wells - 4.22 lakh hectares. -3.7% (Approx)

Total is 17.8 hectares

Total area sown-109 lakh hactares. i.e., 16.5% of the total area is under irrigation.

Total number of wells existing in the State—3.6 lakhs,

Total number of P. sets energised till the end of January 75.	2,02,042.
Pragramme of I.P. sets to be energised during the year 1974-75.	25,000.
Programme of energisation of I.P. sets for the year 1975-76.	30,000 Approx.

ಇಷ್ಟು ಬಾವಿಗಳಿಗೆ ವಿದ್ಯುಚ್ಛಕ್ತಿ ಒದಗಿಸಿ ಅದಕ್ಕೆ ಬೇಕಾದಂಥ ಪಂಪ್‌ಸೆಟ್ಟುಗಳು ಮತ್ತು ಅದಕ್ಕೆ ಬೇಕಾದಂಥ ಸಾಲ ಪಗೈರಗಳನ್ನು ಕೇಂದ್ರ ಭೂ ಅಭಿವೃದ್ಧಿ ಬ್ಯಾಂಕ್ ಮತ್ತು ತಾಲ್ಲೂಕು ಭೂ ಅಭಿವೃದ್ಧಿ ಬ್ಯಾಂಕ್ ಮುಖಾಂತರ ಕೊಡುವ ಯೋಜನೆಯನ್ನು ಹಾಕಿಕೊಂಡಿದ್ದೇವೆ. ಈಗಾಗಲೇ ಸುಮಾರು 14 ಕೋಟಿ ರೂಪಾಯಿಗಳನ್ನು ಈ ಯೋಜನೆಗೋಸ್ಕರ ಖರ್ಚುಮಾಡುವವರಾಗಿದ್ದೇವೆ.

ಇವತ್ತು ನಮ್ಮ ರಾಜ್ಯದ ವ್ಯವಸಾಯ ಇಲಾಖೆಯ ಮೂಲಕ ಆಗಿರತಕ್ಕ ಪ್ರಗತಿಯ ಬಗ್ಗೆ ಹೇಳುವುದಾದರೆ ನಮ್ಮ ರಾಜ್ಯದಲ್ಲಿ ಇದರ ಬಗ್ಗೆ ಸಾಕಷ್ಟು ಕೆಲಸವಾಗಿದೆ. ಇದರ ಬಗ್ಗೆ ಹೆಚ್ಚು ಟೀಕೆ ಟಿಪ್ಪಣಿಗಳು ಬರಲಿಲ್ಲ ಎನ್ನತಕ್ಕಂಥಾದ್ದು ಒಂದು ಒಳ್ಳೆಯ ಸಂಗತಿ. ಅಷ್ಟಕ್ಕೆ ನಾವು

ಬೆನ್ನು ತಟ್ಟಿಕೊಂಡರೆ ಅದು ಸರಿಯಲ್ಲ. ನಮ್ಮ ಇಲಾಖೆ ಇತರೆ ವಿಚಾರಗಳಲ್ಲಿ ಏನು ಆಗಬೇಕಾಗಿದೆ, ಕೆಲವು ಲೋಪದೋಷಗಳನ್ನು ತಿದ್ದಿಕೊಳ್ಳತಕ್ಕದ್ದು ಮತ್ತು ಹೆಚ್ಚು ಇಳುವರಿಯ ಶಕ್ತಿವಾನ್ ಬೆಳೆಗಳನ್ನು ಮತ್ತು ವ್ಯವಸಾಯದ ಸಂಶೋಧನಾ ಫಲವನ್ನು ರೈತರಿಗೆ ಮುಟ್ಟಿಸತಕ್ಕಂಥ ದಿಶೆಯಲ್ಲಿ ಮಾಡಿರತಕ್ಕ ಕೆಲವು ಅಂಕಿಸಂಖ್ಯೆಗಳನ್ನು ಕೊಡುವುದು ಸೂಕ್ತವೆಂದು ನಾನು ಇವತ್ತಿನ ದಿವಸ ನಮ್ಮ ರಾಜ್ಯದಲ್ಲಿ ಬೆಳೆಯತಕ್ಕಂಥ ಬೆಳೆಗಳು ಅದರಲ್ಲೂ ಮುಖ್ಯವಾಗಿ ಬತ್ತ, ರಾಗಿ, ಜೋಳ, ಬಾಜ್ರ, ಮತ್ತು ಮೈಜೆ, ಅದರಲ್ಲೂ ಸಂಕೀರ್ಣ ಜಾತಿಯ ಮುಸುಕಿನ ಜೋಳ ಮತ್ತು ಮಿಲೆಟ್ ಕ್ರಾಪ್ಸ್ ಇವೆಲ್ಲವನ್ನೂ ಸಹ ನಾನು ಇವತ್ತಿನ ದಿವಸ ಹೇಳುವುದಕ್ಕೆ ಹೋದರ ಇವುಗಳನ್ನು ಒಟ್ಟು ಏರಿಯಾದಲ್ಲಿ ಬೆಳೆಯತಕ್ಕ ಬೆಳೆಗಳ ಅಂಕಿಸಂಖ್ಯೆಗಳನ್ನು ಹೆಚ್ಚಿಗೆ ಇದರ ಬಗ್ಗೆ ಹೇಳುವುದಿಲ್ಲ. ಒಟ್ಟಿನಲ್ಲಿ ಒಂದು ಹೆಕ್ಟೇರಿಗೆ ಆವರೇಜ್ ಈಲ್ಡ್ ಬರತಕ್ಕದ್ದು, ಹೈ ಯಿಲ್ಡ್ ವೆರೈಟೀಸ್‌ನ್ನು ಇಲ್ಲಿ ಹೇಳಿದರೆ ಸಮಯೋಚಿತವಾಗಿರುತ್ತದೆ ಎಂದು ಕಾಣುತ್ತದೆ. ಬತ್ತಕ್ಕೆ ಅವರೇಜ್ ಯಿಲ್ಡ್ ಅಂಡರ್ ಹೈಯಿಲ್ಡ್ ಪ್ರೋಗ್ರಾಮುನಲ್ಲಿ 2977 ಕೆಜಿಸ್ ಜವರ್ 2289 ಕ.ಜಿ ಬಾಜ್ರ, 1477 ಕೆ.ಜಿ. ಮೈಜೆ ಇದ್ದುದು 3456 ಕೆ. ಜಿ. ಆಗಿದೆ. ಕಳೆದ 1955—56ರಲ್ಲಿ ಏನು ಇಳುವರಿ ಬರುತ್ತಿತ್ತೋ ಅದು ಸೀರಿಯಲ್ಸ್ 581 ಕೆಜಿ ಪರ್ ಹೆಕ್ಟೇರ್‌ಗೆ ಬರುತ್ತದೆ. 1973-74ರಲ್ಲಿ 987 ಕೆಜಿ ಒಂದು ಹೆಕ್ಟೇರ್‌ಗೆ ಸರಾಸರಿ ಬರುತ್ತಿತ್ತು. ಸೀರಲ್ಸ್ ಪಲ್ಸ್ ಅಂದರೆ ದ್ವಿದಳಧಾನ್ಯಗಳು ಇವತ್ತು 412 ಕೆಜಿ ಬರುತ್ತದೆ. ಟೋಟಲ್ ಅವರೇಜ್ ತೆಗೆದುಕೊಂಡರೆ 877 ಕಜಿ ಪರ್ ಹೆಕ್ಟಾರ್‌ಗೆ ಬರತಕ್ಕದ್ದು ಇದೆ. ಇವತ್ತು ನಮ್ಮ ರಾಜ್ಯದಲ್ಲಿ ಮುಖ್ಯವಾಗಿ ಶ್ರೀ ಶಾಮಣ್ಣನವರು ಒಂದು ಮುಖ್ಯವಾದ ವಿಚಾರವನ್ನು ಹೇಳಿದರು. ಸರ್ಕಾರದ ಪಾಲಿಸಿ ಇವತ್ತಿನ ದಿವಸ ಈ ಫುಡ್ ಕ್ರಾಪ್ಸ್ ಬಗ್ಗೆ ಹೆಚ್ಚು ಗಮನಕೊಡದೆ ರೊಕ್ಕದ ಬೆಳೆಗಳಿಗೆ ಹೆಚ್ಚು ಪ್ರದೇಶಗಳನ್ನು ಉಪಯೋಗಿಸುತ್ತಿದ್ದಾರೆ; ಹತ್ತಿ ಬೆಳೆಯನ್ನು ಬೆಳೆಯತಕ್ಕದ್ದು ಕಡಿಮೆಯಾಗುತ್ತಿದೆ ಎಂದು ಹೇಳಿದ್ದಾರೆ. ಆ ಮಾತನ್ನು ಒಪ್ಪಿಕೊಳ್ಳುವುದಾದರೂ ಸಹ ನಮ್ಮಲ್ಲಿ ಇರತಕ್ಕ ಅಂಕಿ ಸಂಖ್ಯೆಗಳನ್ನು ನೋಡಿದಾಗ ಸ್ವಲ್ಪ ಪ್ರದೇಶಗಳಲ್ಲಿ ಮಾತ್ರ ರೊಕ್ಕದ ಬೆಳೆಗಳನ್ನು ಬೆಳೆಯುವುದಕ್ಕೆ ಜಮೀನನ್ನು ಉಪಯೋಗಿಸಿಕೊಳ್ಳುತ್ತಾರೆ ಎನ್ನುವ ಮಾತನ್ನು ಒಪ್ಪಿಕೊಳ್ಳುವುದಾದರೂ ಮುಖ್ಯವಾಗಿ ನಾನು ಪ್ರಸ್ತಾಪ ಮಾಡಿದ ಹಾಗೆ ಇವತ್ತು ವ್ಯವಸಾಯದಲ್ಲಿ ಹೆಚ್ಚು ಪ್ರಗತಿಯಾಗಿದೆ. ಅದರಲ್ಲೂ ಮುಖ್ಯವಾಗಿ ಹೆಚ್ಚು ಇಳುವರಿ ಮತ್ತು ಶಕ್ತಿವಾನ್ ಬೆಳೆಗಳನ್ನು ಸಾಂದ್ರ ಬೇಸಾಯ ಮಾಡತಕ್ಕದ್ದು ಇನ್‌ಟೆನ್‌ಸಿವ್ ಅಗ್ರಿಕಲ್ಚರ್ ಆಗಿದೆ. ಇವತ್ತಿನ ದಿವಸ ಹೆಚ್ಚು ಬೆಳಗಳನ್ನು ರೋಗರುಜಿನಗಳಿಂದ ತಡೆಗಟ್ಟಿ ಹೆಚ್ಚು ಗೊಬ್ಬರಗಳನ್ನು ಕೊಡತಕ್ಕದ್ದು ಮತ್ತು ಹೆಚ್ಚು ಶಕ್ತಿ ಇರುವ ಬೀಜಗಳನ್ನು ಉಪಯೋಗಿಸುವುದರಿಂದ ನಮ್ಮಲ್ಲಿ ಇರತಕ್ಕ ಬೆಳೆಗಳಿಗೆ ಹೆಚ್ಚು ಇಳುವರಿ ಬರತಕ್ಕಂಥಾದ್ದು ಆಗಿರುವುದರಿಂದ ಇದರ ಬಗ್ಗೆ ಹೈಯೀಲ್ಡ್ ವೆರೈಟೀಸ್ ಮತ್ತು ಹೈಬ್ರಿಡ್ ವೆರೈಟೀಸ್ ಬಂದಿರುವುದರಿಂದ ಇಷ್ಟು ಪ್ರಗತಿಯಾಗಿದೆ. ಆದುದರಿಂದ ಆಹಾರಪದಾರ್ಥವನ್ನು ಕೊಂಡುಕೊಳ್ಳಲಿಲ್ಲವೆಂದು ಸ್ಪಷ್ಟವಾಗಿ ಹೇಳಬೇಕಾಗಿದೆ. ಇವತ್ತು ನಾವು ರೊಕ್ಕದ ಬೆಳೆಗಳನ್ನು ಬೆಳೆಯಬೇಕು. ನಮ್ಮ ರಾಜ್ಯದಲ್ಲಿ ಮತ್ತು ನಮ್ಮ ದೇಶದ ಮಟ್ಟದಲ್ಲಿ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ರೊಕ್ಕದ ಬೆಳೆಗಳಿಗೆ ಅದರಲ್ಲೂ ಅಂತರರಾಜ್ಯ ಮಾರ್ಕೆಟ್‌ನಲ್ಲಿ ಹೆಚ್ಚು ಬೆಲೆ ಸಿಕ್ಕತಕ್ಕ ಹತ್ತಿ ಕಬ್ಬು ಹೊಗೆಸೊಪ್ಪು ಬೆಳೆಗಳನ್ನು ಬೆಳೆಯತಕ್ಕಂಥಾದ್ದು ಮಾಡಲೇಬೇಕು ಎಂಬುದು ನಮ್ಮ ಗುರಿಯಾಗಿದೆ. ಹೆಚ್ಚು ಇಳುವರಿಯನ್ನು ಕನಿಷ್ಟ ಭೂಮಿಯಲ್ಲಿ ಪಡೆಯತಕ್ಕದ್ದು ಮುಖ್ಯವಾಗಿರುವುದರಿಂದ ಆ ದಿಶೆಯಲ್ಲಿ ಸಹಾಯ ಮತ್ತು ಉತ್ತೇಜನ ಕೊಡುವುದು ಸಾಧುವಾಗಿದೆ. ಅದರಲ್ಲೂ ನಾವು ಎಣ್ಣೆ ಕಾಳುಗಳನ್ನು ಬೆಳೆಯತಕ್ಕಂಥಾದರಲ್ಲಿ ನಾವು ಸ್ವಾವಲಂಭಿಗಳಾಗಿಲ್ಲ. ಆದುದರಿಂದ ಇದರ ಬಗ್ಗೆಯೂ ಸಹ, ಪಲ್ ಕ್ರಾಪ್ಸ್ ಬಗ್ಗೆ ಹೆಚ್ಚು ಇಳುವರಿ ಕೊಡುವಂಥದ್ದನ್ನು ಎರಡು ಬೆಳೆ ತೆಗೆಯಲಾಗಿದೆ. ನಮ್ಮ ದೇಶದಲ್ಲಿ ಎರಡು ಬೆಳೆ ಬೆಳೆಯುವ ಕಡೆಗಳಲ್ಲಿ ರಾಗಿ ಬೆಳೆಯನ್ನು ಜೂನ್‌ನಲ್ಲಿ ಬಿತ್ತುವುದಕ್ಕೆ ಮುಂದೆ ಅಲಸಂದೆ ಬೆಳೆಯನ್ನು ಬೆಳೆಯುವುದಕ್ಕೆ ಉತ್ತೇಜನ ಮಾಡುತ್ತಿದ್ದೇವೆ. ಆದರಲ್ಲೂ ನಮ್ಮ ರಾಜ್ಯದಲ್ಲಿ ಇವತ್ತಿನ ದಿವಸ ಹತ್ತಿಯನ್ನು ಬೆಳೆಯತಕ್ಕಂಥಾದ್ದು ಮುಖ್ಯವಾದುದಾಗಿದೆ. ಆದುದರಿದಷ್ಟ್ಯ ವರಲಕ್ಷ್ಮಿ ಹತ್ತಿಯನ್ನು ಬೆಳೆಯುತ್ತಿದ್ದೇವೆ. ಅನೇಕ ಮಾನ್ಯ ಸದಸ್ಯರು ಈಗಾಗಲೇ ಸಿಲ. ವಳಿ ಸೂಚನೆಯನ್ನು ಮತ್ತು ಅನೇಕ ಪ್ರಶ್ನೆಗಳನ್ನು ಹಾಕಿ ವರಲಕ್ಷ್ಮಿ ಹತ್ತಿಯನ್ನು ಬೆಳೆಯುವವರಿಗೆ ಉತ್ತೇಜನ ಕೊಡಬೇಕು ಮತ್ತು ಬೀಜೋತ್ಪನ್ನ ಮತ್ತು ಹತ್ತಿಗೆ ಮಾರ್ಕೆಟ್‌ನಲ್ಲಿ ಒಳ್ಳೆಯಬೆಂಲೆ ದೊರಕುವ ಹಾಗೆ ಮಾಡಬೇಕು ಎಂದು ಸರ್ಕಾರಕ್ಕೆ ಮನವಿಯನ್ನು ಕೊಟ್ಟಿದ್ದಾರೆ. ಆದುದರಿದದ ನಮ್ಮಲ್ಲಿ ಈ ಒಂದು ಬೆಳೆಯನ್ನು ಬೆಳೆಯತಕ್ಕಂಥಾದ್ದು, ಇದಕ್ಕೆ ಉತ್ತೇಜನ ಕೊಡುವಂಥಾದ್ದು ಸಾಧುವಾಗಿದೆ ಮತ್ತು ಇದು ಸರ್ಕಾರ ನೀತಿಯಾಗಿದೆ. ಅದರ ಪ್ರಕಾರ ನಮ್ಮಲ್ಲಿ ಬೆಳೆಯುಕ್ಕ ಮುಖ್ಯವಾದ ರೊಕ್ಕದ ಬೆಳೆಗಳಲ್ಲಿ ಆಗಲೇ ಹೇಳಿದಂತೆ ಹತ್ತಿ ಮತ್ತು ಕಬ್ಬು, ಹೊಗೆಸೊಪ್ಪು ಈ ಬೆಳೆ

ಗಳನ್ನು ಬೆಳೆಯುತಕ್ಕಂಥದ್ದಾಗಿದೆ. ಇವುಗಳಲ್ಲಿ ಮುಖ್ಯವಾದ ಹತ್ತಿ ಬೆಳೆಯನ್ನು ನಾವು ಕಳೆದ ವರ್ಷದ್ದನ್ನು ತೆಗೆದುಕೊಂಡರೆ ನಮ್ಮಲ್ಲಿ ವರಲಕ್ಷ್ಮಿ ಹತ್ತಿಯನ್ನು ಹೆಚ್ಚಿಗೆ ಬೆಳೆಯುವ ಪ್ರದೇಶದಲ್ಲಿ ಮುಂದಿನ ವರ್ಷ ಇನ್ನೂ ಹೆಚ್ಚು ಪ್ರದೇಶದಲ್ಲಿ ಬೆಳೆಯುವ ಒಂದು ಗುರಿಯನ್ನು ಇಟ್ಟುಕೊಂಡಿದ್ದೇವೆ. ಈ ವರ್ಷ 40 ಸಾವಿರ ಎಕರೆಗಳಲ್ಲಿ ಬೆಳೆದಿರತಕ್ಕಂಥದ್ದು ಮಾರ್ಕೆಟ್ಟಿಗೆ ಬಂದಿದೆ. ಅದೇ ರೀತಿಯಲ್ಲಿ ಕಬ್ಬನ್ನು ಬೆಳೆಯುವ ಪ್ರದೇಶದಲ್ಲಿಯೂ ಸಹ ಹೆಚ್ಚು ಕಬ್ಬನ್ನು ಬೆಳೆದು ಅಂತರ ರಾಷ್ಟ್ರೀಯ ಮಾರ್ಕೆಟ್ಟಿನಲ್ಲಿ ಹೆಚ್ಚು ಬೆಲೆ ದೊರೆಯುವ ಹಾಗೆ ಮಾಡಬೇಕೆಂಬ ಗುರಿಯನ್ನು ಇಟ್ಟು ಕೊಂಡಿದ್ದೇವೆ. 1971-72ರಲ್ಲಿ 88 ಲಕ್ಷ ಟನ್ ಒಂದು ಲಕ್ಷ ಹೆಕ್ಟೇರ್‌ನಲ್ಲಿ ಬೆಳೆದಿದ್ದೇವೆ. 1973-74ರಲ್ಲಿ ಸಾಮಾನ್ಯವಾಗಿ ಇಷ್ಟೇ ಬೆಳೆದಿದ್ದೇವೆ. ಈ ವರ್ಷ 1974-75ರಲ್ಲಿ 92 ಲಕ್ಷ ಟನ್ ಬೆಳೆಯುತಕ್ಕಂಥಾದ್ದು. 1975-76ರಲ್ಲಿ 97 ಲಕ್ಷ ಟನ್ ಕಬ್ಬಿನ ಉತ್ಪಾದನೆ ಮಾಡಬೇಕೆಂದು ಗುರಿಯನ್ನು ಇಟ್ಟುಕೊಂಡಿದ್ದೇವೆ. ಅದೇ ರೀತಿಯಲ್ಲಿ ಹೊಗೆಸೊಪ್ಪು ವರ್ಜೀನಿಯಾ ಟೊಬೆಕೋವನ್ನು ಸಿಗರೇಟಿಗೆ ಉಪಯೋಗಿಸತಕ್ಕಂಥಾದ್ದು 1975—76ರಲ್ಲಿ ಸುಮಾರು 26 ಸಾವಿರ ಟನ್ ಉತ್ಪಾದನೆ ಮಾಡಬೇಕೆಂದು ಗುರಿಯನ್ನು ಇಟ್ಟುಕೊಂಡಿದ್ದೇವೆ. ಮತ್ತು ಹೆಚ್ಚು ಇಳುವರಿ ಕೊಡತಕ್ಕ ಬೆಳೆಗಳನ್ನು ಬೆಳೆಯುವುದು, ಇವುಗಳಲ್ಲಿ ಪ್ರಗತಿ ಆಗಿರತಕ್ಕಂಥಾದನ್ನು ಕೆಲವು ಅಂಕಿಸಂಖ್ಯೆಗಳನ್ನು ಕೊಡತಕ್ಕಂಥಾದ್ದು ಮುಖ್ಯವಾಗಿ ಈ ಸದನದ ಮುಂದೆ ಇಡಬೇಕಾದದ್ದು ನನ್ನ ಮುಖ್ಯ ಕರ್ತವ್ಯವೆಂದು ನಾನು ತಿಳಿದುಕೊಂಡಿದ್ದೇನೆ. ಮುಖ್ಯವಾಗಿ ಬತ್ತ 1971-72ರಲ್ಲಿ 1 ಲಕ್ಷ 71 ಸಾವಿರ ಹೆಕ್ಟೇರ್‌ನಲ್ಲಿ ಆಯಿತು. 1973-74ರಲ್ಲಿ ಹೆಚ್ಚು ಇಳುವರಿ ಕೊಡತಕ್ಕದು 3 ಲಕ್ಷ 24 ಸಾವಿರ ಹೆಕ್ಟೇರ್‌ನಲ್ಲಿ ಆಗಿದೆ. 1974-75ರಲ್ಲಿ 4 ಲಕ್ಷ 6 ಸಾವಿರ ಹೆಕ್ಟೇರ್‌ನಲ್ಲಿ ಬೆಳೆಯಬೇಕೆಂಬ ಗುರಿಯನ್ನು ಇಟ್ಟುಕೊಂಡಿದ್ದೇವೆ. ಈ ಗುರಿಯನ್ನು ಮುಟ್ಟತಕ್ಕದ್ದು ಸಾಧ್ಯವಿರುವ ಹಾಗೆ ಕಾಣುತ್ತದೆ. 1975-76ರಲ್ಲಿ $4\frac{1}{2}$ ಲಕ್ಷ ಹೆಕ್ಟಾರ್‌ನಲ್ಲಿ ಹೆಚ್ಚು ಇಳುವರಿ ಕೊಡತಕ್ಕ ಬತ್ತವನ್ನು ಬೆಳೆಯತಕ್ಕಂಥಾದ್ದು ಇದೆ. ನಮ್ಮ ರಾಜ್ಯದಲ್ಲಿ ರೈತರಿಗೆ ಮಾಹಿತಿ ಒದಗಿಸಿದರೆ ರೈತರೇ ಈ ಕಾರ್ಯವನ್ನು ಪೂರ್ಣ ಮಾಡಬೇಕೆಂಬ ಗುರಿಯನ್ನು ಇಟ್ಟುಕೊಂಡಿದ್ದೇವೆ. ಅದೇ ರೀತಿ ಶಕ್ತಿಮಾನ್ ಹೆಚ್ಚು ಇಳುವರಿ ಕೊಡತಕ್ಕ ಜೋಳವನ್ನು 1971-72ರಲ್ಲಿ 2.09 ಲಕ್ಷ ಹೆಕ್ಟೇರ್‌ನಲ್ಲಿ ಬೆಳೆದಿದ್ದೇವೆ. 1973-74ರಲ್ಲಿ 3.36 ಲಕ್ಷ ಹೆಕ್ಟೇರ್‌ನಲ್ಲಿ ಬೆಳೆದಿದ್ದೇವೆ. 1974-75ರಲ್ಲಿ 1.40 ಲಕ್ಷ ಹೆಕ್ಟೇರ್‌ನಲ್ಲಿ ಬೆಳೆಯುತಕ್ಕಂಥಾದ್ದಾಗಿದೆ. 1975-76ರಲ್ಲಿ 4 ಲಕ್ಷ 90 ಸಾವಿರ ಹೆಕ್ಟೇರ್‌ನಲ್ಲಿ ಬೆಳೆಯಬೇಕೆಂಬ ಗುರಿಯನ್ನು ಇಟ್ಟುಕೊಂಡಿದ್ದೇವೆ. ಅದೇ ರೀತಿ ಶಕ್ತಿಮಾನ್ ಬಾಜ್ರ ಮತ್ತು ಗೋಧಿ ಮತ್ತು ಮೈಜ್ ಹೆಚ್ಚು ಪ್ರದೇಶದಲ್ಲಿ ಬೆಳೆಯಬೇಕಾಗಿದೆ. ನಮ್ಮ ರಾಜ್ಯದಲ್ಲಿ ಸಾಮಾನ್ಯವಾಗಿ ಶಕ್ತಿಮಾನ್ ಮುಸುಕಿನ ಜೋಳ 1971-72ರಲ್ಲಿ 1 ಲಕ್ಷ ಹೆಕ್ಟೇರ್‌ನಲ್ಲಿ ಬೆಳೆ ಆಯಿತು. 1973-74ರಲ್ಲಿ 1973-74ರಲ್ಲಿ 1 ಲಕ್ಷ 51 ಸಾವಿರ ಹೆಕ್ಟೇರ್‌ನಲ್ಲಿ ಆಯಿತು. 1974-75ರಲ್ಲಿ ಅದೇ ಪ್ರದೇಶದಲ್ಲಿ ಬೆಳೆಯಬೇಕೆಂಬ ಗುರಿಯನ್ನು ಇಟ್ಟುಕೊಂಡಿದ್ದೇವೆ. ಈ ವರ್ಷ ಮತ್ತೊಂದು ಮುಖ್ಯವಾದ ತೀರ್ಮಾನವನ್ನು ಸರ್ಕಾರದ ಮಟ್ಟದಲ್ಲಿ ತೆಗೆದುಕೊಂಡಿದ್ದೇವೆ. ಶಕ್ತಿಮಾನ್ ಹೆಚ್ಚು ಇಳುವರಿ ಕೊಡತಕ್ಕ ಬೆಳೆಗಳನ್ನು ಪರಿಗಣನೆ ತೆಗೆದುಕೊಂಡಿದ್ದೇವೆ. ಅದೇ ರೀತಿ ಜೋಳ ಮುಸುಕಿನ ಜೋಳ ಮುಸುಕಿನ ಜೋಳ ಮತ್ತು ಗೋಧಿ, ಅದೇ ರೀತಿಯಲ್ಲಿ ರಾಗಿ ಬೆಳೆಯುತಕ್ಕದ್ದು ಹೈಯೀಲ್ಡಿಂಗ್ ಆಗಬೇಕು ಎಂದು ಕೃಷಿ ವಿಶ್ವವಿದ್ಯಾನಿಲಯದವರು ಕೆಲವು ಸಲಹೆಗಳನ್ನು ಈಗಾಗಲೇ ಕೊಟ್ಟಿದ್ದಾರೆ.

ಮುಖ್ಯವಾಗಿ ಜನಪ್ರಿಯವಾಗಿರತಕ್ಕ ಪೂರ್ಣ ರಾಗಿ ಜಾತಿಗೆ ಶಾರದ ಮತ್ತು ಶಕ್ತಿ ತಳಿಗಳನ್ನು ರೈತರಿಗೆ ಬಿಡುಗಡೆ ಮಾಡಿದ್ದೇವೆ. ಆ ಬಗ್ಗೆ ಬಹಳ ಪ್ರಚಾರ ಮಾಡಬೇಕೆಂದು ಗುರಿ ಇಟ್ಟುಕೊಂಡಿದ್ದೇವೆ. ರಾಗಿಯಲ್ಲಿ ಒಳ್ಳೆಯ ಪರಿಶೋಧನೆ ಆಗಬೇಕು, ರಾಗಿ ಮೈಸೂರು ಭಾಗದಲ್ಲಿ ಸಾಮಾನ್ಯವಾಗಿ ಬೇಕಾದಂತ ಆಹಾರವಾಗಿದೆ. ಅದಕ್ಕೆ ಹೆಚ್ಚಿನ ಹಾಗೂ ಎಲ್ಲ ರೀತಿಯ ಪ್ರೋತ್ಸಾಹ ಕೊಡಬೇಕು, ಆದಕ್ಕೆ ಬೇಕಾದಂತ ಗೊಬ್ಬರ, ಇನ್‌ಪುಟ್ಸ್ ಅವುಗಳನ್ನು ಹೆಚ್ಚು ಹೆಚ್ಚಾಗಿ ಪ್ರಚಾರದಲ್ಲಿ ತರಬೇಕು ಎಂದು ಗುರಿಯಿಟ್ಟುಕೊಂಡಿದ್ದೇವೆ. ಶಿವಮೊಗ್ಗದವರು ಬರೀ ಭತ್ತವನ್ನು ಬೆಳೆಯುವುದರಲ್ಲಿಯೇ ಇದ್ದಾರೆ.

5-00 P. M.

ಶ್ರೀ ಕೋಣಂದೂರು ಲಿಂಗಪ್ಪ.—ಭೂಮಿ ಕೊಡಿ, ಕಾಡಿನವರು ಕೊಡುವುದಿಲ್ಲ.

ಶ್ರೀ ಎನ್. ಚಿಕ್ಕೇಗೌಡ.—ಇರತಕ್ಕ ಭೂಮಿಯಲ್ಲಿಯೇ ಬೆಳೆಯಬೇಕು. ಒಟ್ಟಿನಲ್ಲಿ ಹೆಚ್ಚು ಇಳುವರಿ ಕೊಡತಕ್ಕ ಬೆಳೆಗಳನ್ನು 1971—72 ರಲ್ಲಿ 6.5 ಲಕ್ಷ ಹೆಕ್ಟೇರ್ಸ್ ಇತ್ತು. ಇವತ್ತು 9.54

ಲಕ್ಷ ಹೆಕ್ಟೇರ್‌ನಲ್ಲಿ ಇಟ್ಟಿದೆ, 1974—75 ರಲ್ಲಿ 11-50 ಲಕ್ಷ ಹೆಕ್ಟೇರಿನಲ್ಲಿ ಇತ್ತು. ಇದನ್ನು 1975—76 ರಲ್ಲಿ 14 ಲಕ್ಷ ಹೆಕ್ಟೇರ್ಸ್‌ಗೆ ಹೆಚ್ಚಿಸಿದೆ.

ಶ್ರೀ ಎಚ್. ಡಿ. ದೇವೇಗೌಡ.—ತಾಲ್ಲೂಕು ಪ್ರೆಸಿಡೆಂಟ್ ಆಗಿದ್ದ ಅನುಭವ ಇದೆ. ಕಾಂಪೋಸ್ಟ್ ಗುಂಡಿ ಲೆಕ್ಕ ಕೇಳಿ ಕೇಳಿ ಸಾಕಾಗಿದೆ,

ಶ್ರೀ ಎನ್. ಚಿಕ್ಕೇಗೌಡ.—ಕಾಂಪೋಸ್ಟ್ ಬಗ್ಗೆ ಹೇಳಿದರೆ ಒಪ್ಪಿಕೊಳ್ಳುತ್ತೇನೆ. ಕಾಂಪೋಸ್ಟ್ ಬಗ್ಗೆ ಸಾಕಷ್ಟು ಪ್ರಚಾರ ಆಗಬೇಕು, ಅದು ಆಗಿಲ್ಲ. ರೈತರೇ ಕಾರ್ಯಗತ ಮಾಡಿಲ್ಲ. ಅದರಲ್ಲಿಯೂ ರಾಸಾಯನಿಕ ಗೊಬ್ಬರದ ಮೇಲೆ ಎಲ್ಲರಿಗೂ ಮನೋಭಾವ ಬೆಳೆಯುತ್ತಾ ಇದೆ. ಅದನ್ನು ತಪ್ಪಿಸಬೇಕು, ನಾವು ಸಹ ರಾಸಾಯನಿಕ ಗೊಬ್ಬರದ ಜೊತೆಗೆ ಆರ್ಗಾನಿಕ್ ಮೆನ್ಯೂರ್ ಕೊಡತಕ್ಕದ್ದು ಪ್ರಚಾರ ಮಾಡಿ ಮತ್ತು ಹಸುರು ಎಲೆ ಗೊಬ್ಬರ ಬೆಳೆಯಬೇಕು. ಮೈಕ್ರೋಬಾಲಿಕ್ ಫರ್ಟಿಲೈಸರ್ಸ್ ಏನು ಇವೆ, ಇವುಗಳನ್ನು ಸಹ ನಾವು ಹೆಚ್ಚು ಹೆಚ್ಚು ಪ್ರಚಾರ ಮಾಡುತ್ತಿದ್ದೇವೆ. ಇವತ್ತಿನ ದಿವಸ ನಮ್ಮ ರಾಜ್ಯದಲ್ಲಿ ಈ ಒಂದು ಹೆಚ್ಚು ಇಳುವರಿ ಕೊಡತಕ್ಕ ಶಕ್ತಿವಾನ್ ಬೆಳೆಗಳನ್ನು ನಾವು ಸಂಪೂರ್ಣವಾಗಿ ಅವಕ್ಕೆ ಬೇಕಾದಂತ ಬೀಜ ಮತ್ತು ಗೊಬ್ಬರವನ್ನು ಕೊಡತಕ್ಕ ಶಕ್ತಿ ಹೊಂದಿದ್ದೇವೆ. ಹೆಚ್ಚು ರೈತರಿಗೆ ಅನುಕೂಲವಾಗುವಂತೆ ತೀರ್ಮಾನವನ್ನು ತೆಗೆದುಕೊಂಡಿದ್ದೇವೆ, ಅದನ್ನು ಈಗಾಗಲೇ ಜಾರಿಗೆ ತಂದಿದ್ದೇವೆ. ಮಾನ್ಯ ದೇವೇಗೌಡರು ಹೇಳಿದಹಾಗೆ ಈಗಾಗಲೇ ಗೊಬ್ಬರ ಹಂಚಿಕೆ ಬಗ್ಗೆ 18 ಲಕ್ಷ ಕಾರ್ಡುಗಳನ್ನು ರೈತರಿಗೆ ಹಂಚಿದ್ದೇವೆ. ಕಳೆದ ಅಧಿವೇಶನದಲ್ಲಿ ಡಿಮ್ಯಾಂಡ್ ಮೇಲೆ ಮಾತನಾಡತಕ್ಕ ಸಂದರ್ಭದಲ್ಲಿ ಹೇಳಿದ್ದೆ, ಕಾರ್ಡುಗಳನ್ನು ಜಾರಿಗೆ ಕೊಡುತ್ತೇವೆಂದು. ಗೊಬ್ಬರ ವಿತರಣೆಯಲ್ಲಿ ಆಗತಕ್ಕ ಲೋಪ ದೋಷಗಳನ್ನು ಕಡಿಮೆ ಮಾಡಿದ್ದೇವೆ. ನಮ್ಮ ರಾಜ್ಯದಲ್ಲಿ ಗೊಬ್ಬರ ವಿತರಣೆ ಏನು ಮಾಡಿದ್ದೇವೆ, ಅದನ್ನು ಆಂಧ್ರ ಮತ್ತು ಮಹಾರಾಷ್ಟ್ರ ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ಬಂದು ನೀವು ಅನುಸರಿಸುವ ಪದ್ಧತಿಯನ್ನು, ಅದನ್ನೇ ಜಾರಿಗೆ ಕೊಡುತ್ತೇವೆ ಎಂದು ಇಲ್ಲಿನ ವ್ಯವಸ್ಥೆಯನ್ನು ನೋಡಿಕೊಂಡು ಹೋಗಿದ್ದಾರೆ. ಇಡೀ ದೇಶದಲ್ಲಿ ಗೊಬ್ಬರ ಕಾರ್ಡುಗಳನ್ನು ಹಂಚುವಿಕೆ ಇಲ್ಲಿ ಆದಷ್ಟು ಯಾವ ರಾಜ್ಯದಲ್ಲಿಯೂ ಆಗಿಲ್ಲ. ಅಂಥ ಒಂದು ದೊಡ್ಡ ನಿಲುವನ್ನು ತೆಗೆದುಕೊಂಡಿದ್ದೇವೆ.

ಶ್ರೀ ಎಚ್. ಡಿ. ದೇವೇಗೌಡ,—ಗೊಬ್ಬರ ಕೊಂಡುಕೊಳ್ಳಲಿಕ್ಕೆ ಗಿರಾಕಿ ಇಲ್ಲ, ಆ ಕಾಲ ಮುಗಿಯಿತು.

ಶ್ರೀ ಎನ್. ಚಿಕ್ಕೇಗೌಡ.—ಈಗಲೂ ಮಾಡುತ್ತೇವೆಂದು ಹೇಳುತ್ತೇನೆ. ಇನ್ನೂ 30 ಲಕ್ಷ ರೈತ ಕುಟುಂಬಕ್ಕೆ ಕಾರ್ಡುಗಳನ್ನು ಹಂಚಬೇಕಾಗಿದೆ. ಗೊಬ್ಬರದ ಬಗ್ಗೆ ಈಗಾಗಲೇ ಅನೇಕ ಸಾರಿ ಪತ್ರಿಕೆಗಳನ್ನು ಸಂದರ್ಶನ ಮಾಡಿ, ಮಾಹಿತಿ ಒದಗಿಸಿದ್ದೇನೆ. ಇನ್ನೂ ರಾಜ್ಯಕ್ಕೆ ಹೆಚ್ಚಿನ ಗೊಬ್ಬರ ಬರುವ ಅವಶ್ಯಕತೆ ಇದೆ, ಕೇಂದ್ರ ಸರ್ಕಾರಕ್ಕೆ ಒತ್ತಾಯ ಮಾಡಿ. ಇದನ್ನು ಪಡೆಯುವ ದಿಸೆಯಲ್ಲಿ ಹೆಚ್ಚು ಸಾಧನೆ ಮಾಡಿದ್ದೇವೆ ಎಂದು ಹೇಳುವುದಕ್ಕೆ ಸಂತೋಷವಾಗುತ್ತದೆ. ಕಳೆದ 2—3 ವರ್ಷಗಳಲ್ಲಿ ನಾವು ಕೇಂದ್ರದಿಂದ ಗೊಬ್ಬರ ಪಡೆಯತಕ್ಕಂಥದ್ದು. 1973—74ರಲ್ಲಿ ಒಂದು ಲಕ್ಷ, 31 ಸಾವಿರ, 550 ಟನ್ ಬೇಡಿಕೆ ಇಟ್ಟಿದ್ದೆವು, 92 ಸಾವಿರ ಟನ್ ನೈಟ್ರೋಜನ್ ಒದಗಿಸಿದರು. 1974—75ರಲ್ಲಿ ಒಂದು ಲಕ್ಷ ಮೂವತ್ತು ಸಾವಿರ ಟನ್ ನೈಟ್ರೋಜನ್‌ಗೆ ಅಲಾಟ್‌ಮೆಂಟ್ ಕೊಟ್ಟರು. ಇನ್ನೂ ಮುಂಗಾರು ಬೆಳೆಗೆ ಕೇಂದ್ರ ಸರ್ಕಾರದವರು 90 ಸಾವಿರ ಟನ್ ನೈಟ್ರೋಜನ್ ರೂಪದಲ್ಲಿ ಕೊಡುವುದಕ್ಕೆ ಒಪ್ಪಿಕೊಂಡಿದ್ದಾರೆ. ಕಳೆದ ವರ್ಷದ ಅಂಕಿ ಸಂಖ್ಯೆಗಳಿಗೆ ಹೋಲಿಸಿ ನೋಡಿದರೆ, ಗೊಬ್ಬರದ ದಾಸ್ತಾನು ಸಾಕಷ್ಟು ಇದೆ. ಗೊಬ್ಬರದ ವಿತರಣೆಯಲ್ಲಿದ್ದ ಕೆಲವು ಕಾನೂನುಗಳನ್ನು ಸಡಿಲಗೊಳಿಸಿದ್ದೇವೆ. ಒಬ್ಬ ರೈತ ಒಂದು ಸೊಸೈಟಿಗೆ ಹೋಗಿ ನಾಲ್ಕು ಮೂಟೆ ಗೊಬ್ಬರನ್ನು ಯಾವುದೇ ರೀತಿಯ ಕಾರ್ಡ್ ತೋರಿಸದೆ ಪಡೆಯುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೇವೆ. ಕಪ್ಪು ಮಾರ್ಕೆಟ್‌ನಲ್ಲಿ ಬಹಳ ಬೇಡಿಕೆ ಇತ್ತು, ಅನೇಕರು ಬ್ಲಾಕ್‌ಮಾರ್ಕೆಟ್ ಮಾರತಕ್ಕ ಪ್ರಸಂಗ ಇತ್ತು, ಅದು ತಪ್ಪಿಹೋಗಿದೆ. ಮಾನ್ಯ ದೇವೇಗೌಡರು ಹೇಳಿದಹಾಗೆ ಪೂಲ್ ಮತ್ತು ನಾನ್‌ಪೂಲ್ ಮ್ಯಾನುಫ್ಯಾಕ್ಚರ್ ಕೋಟಾ ಅದು ಮಾಡಬೇಕಾಗಿದೆ. ಒಟ್ಟಿನಲ್ಲಿ ಕೇಂದ್ರ ಸರ್ಕಾರದ ನೀತಿ.........

ಶ್ರೀ ಕೆ. ಎಚ್. ಹನುಮೇಗೌಡ.—ಒಳ್ಳೆಯ ವಿಚಾರ ಇದ್ದರೆ, ಕೇಂದ್ರದವರಿಗೆ ತಿಳಿಸಿ, ಪರಿಣಾಮಕಾರಿಯಾಗಿ ಮಾಡುವುದಕ್ಕೆ ಏತಕ್ಕೆ ಆಗುವುದಿಲ್ಲ ?

ಶ್ರೀ ಎನ್. ಚಿಕ್ಕೇಗೌಡ.—ಬಿಗಡಾಯಿಸತಕ್ಕ ಪರಿಸ್ಥಿತಿ ಬಂದರೆ, ಒತ್ತಾಯಮಾಡಿ, ಫೂಲ್ ಮತ್ತು ನಾನ್ ಫೂಲ್ ಕೋಟಾ ಮ್ಯಾನುಫ್ಯಾಕ್ಚರ್ ಕೋಟಾ ಕೊಟ್ಟಿದ್ದಾರೆ, ಅದನ್ನು ಕೊಡುವ ಬಗ್ಗೆ ರೈತರಿಗೆ ಏನಾದರೂ ತೊಂದರೆ ಮಾಡಿದರೆ, ಬೇರೆ ದುರ್ವ್ಯವಹಾರಗಳನ್ನು ಮಾಡಿದರೆ ಅದರ ಬಗ್ಗೆ ಕ್ರಮ ತೆಗೆದುಕೊಳ್ಳೋಣ, ಮತ್ತು ಕೇಂದ್ರ ಸರ್ಕಾರಕ್ಕೆ ಒತ್ತಾಯಮಾಡೋಣ, ಇವತ್ತಿನ ಪರಿಸ್ಥಿತಿ ಮುಂಗಾರು ಮತ್ತು ಹಿಂಗಾರು ಬೆಳೆಗೆ. ಒಂದು 'ವರ್ಷಕ್ಕೆ ಆಗುವಷ್ಟು ಗೊಬ್ಬರ ನಮ್ಮಲ್ಲಿ ದಾಸ್ತಾನು ಇದೆ. ರಾಜ್ಯದ ಹಿತದೃಷ್ಟಿಯಿಂದ ಮತ್ತು ರೈತರ ಹಿತದೃಷ್ಟಿಯಿಂದ ಈ ದಾಸ್ತಾನು ಮಾಡಲಾಗಿದೆ. ಅದರ ಅಂಕಿಸಂಖ್ಯೆಗಳನ್ನು ಹೇಳತಕ್ಕ ಗೋಜಿಗೆ ಹೋಗುವುದಿಲ್ಲ. ಇದರ ಬಗ್ಗೆ ವಿರೋಧಪಕ್ಷದ ನಾಯಕರು, ಅಂಕಿಸಂಖ್ಯೆಗಳನ್ನು ಕೊಡಬೇಕಾಗಿಲ್ಲ ಎಂದು ಒಪ್ಪಿಕೊಂಡಿದ್ದಾರೆ, ಉದಾರ ಮನಸ್ಸುಮಾಡಿ, ರಾಜ್ಯದ ಜನತೆ ರೈತರಿಗೆ ಆಗತಕ್ಕ ಅನುಕೂಲದ ಬಗ್ಗೆ ಒತ್ತಾಯ ಮಾಡಲಿಲ್ಲ. ಮಾನ್ಯ ದೇವೇಗೌಡರು ರಾಜ್ಯದಲ್ಲಿ ಬೀಜ ಉತ್ಪಾದನೆ ಬಗ್ಗೆ ಹೇಳಿದರು, ಬಿತ್ತನೆ ಜೋಳ, ಶಕ್ತಿಮಾನ್ ಜೋಳಕ್ಕೆ ಬಹಳ ಬೇಡಿಕೆ ಇದೆ, ಜನತೆಯ ಪ್ರತಿನಿಧಿಗಳು ಇದರ ಬೇಡಿಕೆ ಸಾಕಷ್ಟು ಇದ್ದುದನ್ನು ಕಂಡು ಹೇಳಿದ ಮೇಲೆ ಸಾಕಷ್ಟು ದಾಸ್ತಾನು ಮಾಡಿದ್ದೇವೆ. ವ್ಯವಸಾಯ ಇಲಾಖಾ ವತಿಯಲ್ಲಿ ಇರುವ ಫಾರಂ ಬಗ್ಗೆ ಹೇಳಿದ್ದಾರೆ, ನಾವು ಉತ್ಪಾದನೆ ಮಾಡುವುದು ಫೌಂಡೇಷನ್ ಸೀಡ್, ನಮ್ಮ ರಾಜ್ಯದಲ್ಲಿರತಕ್ಕ 63 ಸೀಡ್ ಫಾರಂ, ಅವುಗಳ ಅಂಕಿಸಂಖ್ಯೆಗಳನ್ನು ಕೊಡುವುದರ ಗೋಜಿಗೆ ಹೋಗುವುದಿಲ್ಲ, ಸದಸ್ಯರಿಗೆ ಅಚ್ಚು ಹಾಕಿಸಿಕೊಟ್ಟಂತ ಪುಸ್ತಕದಲ್ಲಿ ಅಂಕಿಸಂಖ್ಯೆಗಳನ್ನು ಒದಗಿಸಿದ್ದೇವೆ. ಶಕ್ತಿಮಾನ್ ಜೋಳ, ಹೆಚ್ಚು ಇಳುವರಿ ಕೊಡತಕ್ಕ ಭತ್ತ ಹಾಗೂ ಇನ್ನಿತರೇ ಬೀಜಗಳು ಏನು ಇವೆ ಮುಂಗಾರು ಮತ್ತು ಹಿಂಗಾರು ಬೆಳೆಯ ದೃಷ್ಟಿಯಿಂದ ಸಾಕಷ್ಟು ದಾಸ್ತಾನು ಮಾಡಿದ್ದೇವೆ. ಅದರಲ್ಲಿ ಇರತಕ್ಕ ಲೋಪವಾದರೂ ಬೀಜ ಮೊಳಕೆ ಬರಲಿಲ್ಲ ಎನ್ನುವುದು ಮತ್ತು ಹೆಚ್ಚು ಇಳುವರಿ ಬೆಳೆಯಾಗಿಲ್ಲ ಎನ್ನುವುದು.

ಶ್ರೀ ಎಚ್. ಡಿ. ದೇವೇಗೌಡ.— ಹೊರಗಡೆ ಸೀಲು ಇರುತ್ತದೆ, ಮೊಳಕೆ ಬರುವುದಿಲ್ಲ.

ಶ್ರೀ ಎನ್. ಚಿಕ್ಕೇಗೌಡ.—ಸರ್ಟಿಫಿಕೇಷನ್‌ನಲ್ಲಿ ಎರಡು ತರಹ ಇದೆ, ತಾವು ಹೇಳತಕ್ಕಂಥಾದ್ದು ಸರ್ಟಿಫೈಡ್ ಸೀಡ್, ಬೀಜ ಹಾಕಿದ್ದು ಮೊಳಕೆ ಬರದೇ ಇರುವ ಪರಿಸ್ಥಿತಿ ಆಗಿದೆ. ಮಾನ್ಯ ಸದಸ್ಯರಿಗೆ ನಾನು ಹೇಳುತ್ತೇನೆ, ಬೀಜ ಸರ್ಟಿಫೈ ಮಾಡತಕ್ಕ ಬಗ್ಗೆ ಬಹಳ ಕಟ್ಟುನಿಟ್ಟಾಗಿ ಮಾಡಬೇಕೆಂದು ಈ ನಮ್ಮ ರಾಜ್ಯ ಸರ್ಕಾರ ತೀರ್ಮಾನ ತೆಗೆದುಕೊಂಡಿದೆ, ಸೀಡ್ ಸರ್ಟಿಫಿಕೇಷನ್ ಏಜೆನ್ಸಿಗೆ ಪ್ರತ್ಯೇಕವಾದ ಅಟಾನಮಸ್ ಬಾಡಿ ಕ್ರಿಯೇಟ್ ಮಾಡಿದ್ದೇವೆ.

ಶ್ರೀ ಎಚ್. ಡಿ. ದೇವೇಗೌಡ.—ಅದಕ್ಕೆ ಚೇರ್‌ಮನ್ ಯಾರು ?

ಶ್ರೀ ಎನ್. ಚಿಕ್ಕೇಗೌಡ.—ನಮ್ಮ ಇಲಾಖೆಯ ಸೆಕ್ರೆಟರಿಯವರೇ ಚೇರ್‌ಮನ್ ಆಗಿರುತ್ತಾರೆ. ಮತ್ತು ಅಲ್ಲಿ ಕೆಲಸ ಮಾಡಲು ಟೆಕ್ನಿಕಲ್ ಆಫೀಸರ್ಸ್ ಇರುತ್ತಾರೆ.

ಶ್ರೀ ಎಚ್. ಡಿ. ದೇವೇಗೌಡ.—ಪರಿಣಿತರಲ್ಲದ ನಮ್ಮಂತಹವರನ್ನು ಚೇರ್‌ಮನ್ ಆಗಿ ನೇಮಕ ಮಾಡಿದರೆ, ಅವರು ದುಡ್ಡು ಹೊಡೆಯುವ ಕೆಲಸ ಮಾಡಿದರೆ ಏನು ಮಾಡುವುದು ?

ಶ್ರೀ ಎನ್. ಚಿಕ್ಕೇಗೌಡ.—ನಮ್ಮ ಇಲಾಖೆಯ ವತಿಯಿಂದ ಈ ಕೆಲಸ ನಡೆದರೆ ಯಾರಾದರು ಒತ್ತಾಯ ಮತ್ತು ಪ್ರಭಾವ ತರುತ್ತಾರೆಂದುಕೊಂಡು ಇದು ಒಂದು ಅಟಾನಮಸ್ ಬಾಡಿ ತರಹ ಕೆಲಸ ಮಾಡಲು ಅವಕಾಶ ಕಲ್ಪಿಸಲಾಗಿದೆ. ಜಾಯಿಂಟ್ ಡೈರೆಕ್ಟರ್ ಸ್ಟೇಟಸ್ ಇರುವವರನ್ನು ಅದಕ್ಕೆ ಸೆಕ್ರೆಟರಿಯನ್ನಾಗಿ ನೇಮಕ ಮಾಡಿದ್ದೇವೆ. ಸೀಡ್ ಪ್ರೊಡಕ್ಷನ್‌ನಲ್ಲಿ ಟ್ರೈನಿಂಗ್ ಆಗಿರುವವರನ್ನು ಸೀಡ್ ಇನ್ಸ್‌ಪೆಕ್ಟರ್ ಆಗಿ ನೇಮಕ ಮಾಡಿದ್ದೇವೆ. ಮತ್ತು ಅದರಲ್ಲಿ ಅನುಭವವಿರುವ ಅಸಿಸ್ಟೆಂಟ್ ಡೈರೆಕ್ಟರ್‌ಗಳು ಸಹ ಇರುತ್ತಾರೆ ನ್ಯಾಷನಲ್ ಸೀಡ್ ಕಾರ್ಪೊರೇಷನ್ ಬಗ್ಗೆ ದೂರುಗಳು ಬಂದಿದ್ದರಿಂದ ನಾವೇ ಒಂದು ಸಪರೇಟ್ ಏಜೆನ್ಸಿಯನ್ನು ಈ ರೀತಿ ಕ್ರಿಯೇಟ್ ಮಾಡಿದ್ದೇವೆ. ರೈತರಿಗೆ ಬಿತ್ತನೆ ಬೀಜ ಕೊಟ್ಟಾಗ ಅವು ಮೊಳಕೆ ಬಾರದಿದ್ದರೆ ರೈತರ ವರ್ಷದ ಜೀವನವೆಲ್ಲಾ ಹಾಳಾಗುತ್ತದೆಂದು ಮಾನ್ಯ ಸದಸ್ಯರು ಏನು ಹೇಳಿದರು ಅದನ್ನು ನಾನೂ ಸಹ ಒಪ್ಪುತ್ತೇನೆ. ಇದೇ ಕಾರಣದಿಂದ ನಾನು ನಮ್ಮ ಅಧಿಕಾರಿಗಳಿಗೆ ಬಿತ್ತನೆ ಬೀಜದ ಗುಣಮಟ್ಟವನ್ನು ಕಟ್ಟುನಿಟ್ಟಾಗಿ ಸರ್ಟಿಫೈ ಮಾಡಬೇಕೆಂದು ಹೇಳಿದ್ದೇನೆ.

ಶ್ರೀ ಕೆ. ಎಚ್. ಹನುಮೇಗೌಡ.—ಯಾವ ಭಾಗದಲ್ಲಿ 300 ಎಕರೆಗಳಲ್ಲಿ ಬಿತ್ತನೇ ಬೀಜವನ್ನು ಬೆಳೆಯುತ್ತಾರೋ ಅಲ್ಲಿಗೆ ಮಾತ್ರ ಹೋಗಿ ಸರ್ಟಿಫೈ ಮಾಡಬೇಕೆಂದು ನಿಮ್ಮ ಏಜೆನ್ಸಿಗೆ ಹೇಳಿದ್ದೀರಿ ; ಅದು ಸರಿಯಿಲ್ಲ ; ಆ ರೀತಿ ಕಡ್ಡಾಯ ಮಾಡಬೇಡಿ ; ಕಡಿಮೆ ವಿಸ್ತೀರ್ಣದಲ್ಲಿ ಬಿತ್ತನೆ ಬೀಜಗಳನ್ನು ಬೆಳೆದಿರುವ ಕಡೆಗಳಲ್ಲಿಯೂ ಸಹ ಅವರು ಹೋಗಿ ಸರ್ಟಿಫೈ ಮಾಡುವಂತೆ ಹೇಳಬೇಕು.

ಶ್ರೀ ಎಚ್. ಡಿ. ದೇವೇಗೌಡ.—ಈಗ ಬೆಂಗಳೂರು ಮತ್ತು ಕೋಲಾರ ಜಿಲ್ಲೆಗಳಲ್ಲಿ ಮಾತ್ರ ಈ ಕೆಲಸ ನಡೆಯುತ್ತಿದೆ.

ಶ್ರೀ ಎನ್. ಚಿಕ್ಕೇಗೌಡ.—ಈ ಎರಡು ಜಿಲ್ಲೆಗಳೇ ಅಲ್ಲದೆ, ಬೀಜಾಪುರ, ಧಾರವಾಡ, ಬಳ್ಳಾರಿ ಮುಂತಾದ ಎಲ್ಲ ಕಡೆಗಳಲ್ಲಿಯೂ ನಡೆಯುತ್ತಿದೆ. ಈಗ ಮಾನ್ಯ ಹನುಮೇಗೌಡರು ಏನು ಹೇಳಿದರು, ಆ ಬಗ್ಗೆ ಹೇಳಬೇಕೆಂದರೆ, ಈಗ ವಿಶ್ವಬ್ಯಾಂಕ್‌ನವರು ಈ ವಿಚಾರದಲ್ಲಿ ನಮಗೆ ಸಹಾಯ ಮತ್ತು ನೆರವು ಕೊಡಲು ಮುಂದೆ ಬಂದಿದ್ದಾರೆ. ಮತ್ತು ಅವರು ನ್ಯಾಷನಲ್ ಸೀಡ್ಸ್ ಕಾರ್ಪೊರೇಷನ್ ಅವರನ್ನು ಏಜೆನ್ಸಿಯನ್ನಾಗಿ ಮಾಡಿ, ನಮ್ಮ ರಾಜ್ಯದ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಅವರನ್ನು ಸಬ್-ಏಜೆನ್ಸಿಯನ್ನಾಗಿ ಮಾಡಿ ಆ ಮೂಲಕ ಬೀಜೋತ್ಪಾದನೆಗೆ ಸಹಾಯ ಮಾಡಲು ಮುಂದೆ ಬಂದಿದ್ದಾರೆ. ಬೀಜೋತ್ಪಾದನೆ ಯಾವ ಭಾಗದಲ್ಲಿ ಮಾಡಬೇಕೆಂಬುದರ ಬಗ್ಗೆ ಇನೂ ತೀರ್ಮಾನ ತೆಗೆದುಕೊಂಡಿಲ್ಲ; ಹಾಸನ ಜಿಲ್ಲೆಯಲ್ಲಿ ಮಾಡಿದರೆ ನಾವು ಅದನ್ನು ಸ್ವಾಗತ ಮಾಡುತ್ತೇವೆ.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಕೃಷ್ಣಪ್ಪನವರು ಮಂತ್ರಿಗಳಾಗಿದ್ದಾಗ ಬೆಂಗಳೂರಿನ ಸುತ್ತಮುತ್ತ ಡೈರಿ ಪ್ರಾರಂಭ ಮಾಡಿದರು. ತಮ್ಮ ಕಾಲದಲ್ಲಿ ಬೆಂಗಳೂರು ಮತ್ತು ಕೋಲಾರ ಜಿಲ್ಲೆಗಳಲ್ಲಿ ಮಾತ್ರ ಬೀಜೋತ್ಪಾದನೆಗೆ ಅವಕಾಶ ಕಲ್ಪಿಸಿಕೊಡುತ್ತೀರಾ ಹೇಗೆ ?

ಶ್ರೀ ಎನ್. ಚಿಕ್ಕೇಗೌಡ.—ವರಲಕ್ಷ್ಮೀ ಹತ್ತಿಬೀಜ, ಶಕ್ತಿವಾನ್ ಮುಸುಕಿನ ಜೋಳ, ಗೋಧಿ ಮತ್ತು ಇನ್ನಿತರ ಬಿತ್ತನೆ ಬೀಜಗಳನ್ನು ಕೇವಲ ಕೋಲಾರ ಮತ್ತು ಬೆಂಗಳೂರಿನಲ್ಲಿ ಮಾತ್ರವಲ್ಲ; ರಾಜ್ಯದ ಯಾವ ಯಾವ ಭಾಗಗಳಲ್ಲಿ ಬೆಳೆಯುತ್ತೇವೆಂದು ರೈತರು ಮುಂದೆ ಬರುತ್ತಾರೋ ಅವರೆಲ್ಲರಿಗೂ ಅವಕಾಶ ಕಲ್ಪಿಸಿಕೊಡುತ್ತೇವೆ. ವರಲಕ್ಷ್ಮೀ ಹತ್ತಿಯನ್ನು ಬೆಳೆಯುತ್ತೇವೆಂದು ರೈತರು ಮುಂದೆ ಬಂದಾಗ ಎಲ್ಲರಿಗೂ ನಾವು ಬೀಜಗಳನ್ನು ಒದಗಿಸಿದ್ದೇವೆ.

ಶ್ರೀ ಕೆ. ಎಚ್. ಹನುಮೇಗೌಡ.—ಇಂದು ಗ್ರಾಮಾಂತರ ಪ್ರದೇಶಗಳಲ್ಲಿರುವ ಯುವಕರು ವ್ಯವಸಾಯ ಮಾಡಲು ಮುಂದೆ ಬರುತ್ತಿದ್ದಾರೆ. ಆದಕಾರಣ ರಾಜ್ಯದ ಎಲ್ಲ ಜಿಲ್ಲೆಗಳಲ್ಲಿಯೂ ಸಹ ಬಿತ್ತನೇ ಬೀಜದ ಉತ್ಪಾದನೆ ಮಾಡಲು ಅವಕಾಶ ಮಾಡಿ ಕೊಡಬೇಕು. ಈಗ 300 ಎಕರೆ ಎಂದು ಏನು ಕಡ್ಡಾಯ ಮಾಡಿದ್ದೀರಿ, ಅದನ್ನು ಒಂದೆರಡು ವರ್ಷಗಳವರೆಗೆ ಮಾಡಬಾರದೆಂದು ಹೇಳುತ್ತೇನೆ. ಮತ್ತು ನಿಮ್ಮ ಏಜೆನ್ಸಿ ಏನಿದ್ದಾರೆ, ಅವರು ಬೆಂಗಳೂರು ಬಿಟ್ಟು ಮುಂದೆ ಹೋಗಿ ಎಲ್ಲ ಕಡೆಯೂ ಸರ್ಟಿಫೈ ಮಾಡುವಂತೆ ಏರ್ಪಾಡು ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಎನ್. ಚಿಕ್ಕೇಗೌಡ.—ಯಾರು ಬೀಜೋತ್ಪಾದನೆ ಮಾಡುತ್ತೇವೆಂದು ಮುಂದೆ ಬರುತ್ತಾರೋ ಅವರೆಲ್ಲರಿಗೂ ಅನುಕೂಲ ಮಾಡಿಕೊಡಿ ಎಂದು ನಮ್ಮ ಅಧಿಕಾರಿಗಳಿಗೆ ಹೇಳುತ್ತೇನೆ. ಈಗಾಗಲೇ ನಾವು ಸಣ್ಣ ರೈತರ ಅಭಿವೃದ್ಧಿ ಕಾರ್ಯಕ್ರಮವನ್ನು ಜಾರಿಗೆ ತಂದಿದ್ದೇವೆ.

ಶ್ರೀ ಎಚ್. ಡಿ. ದೇವೇಗೌಡ.—ಜಾರಿಗೆ ಕೊಟ್ಟಿದ್ದೀರಿ, ಸಂತೋಷ. My demand is there for the last seven years. Mr. G. V. K. Rao has written me a letter when he was the Development Commissioner.

ಶ್ರೀ ಎನ್. ಚಿಕ್ಕೇಗೌಡ.—ಈ ಸೀಡ್ಸ್ ಫಾರಮ್‌ಗಳು ಎಕನಾಮಿಕ್ ಆಗಿ ಕೆಲಸಮಾಡುತ್ತಿಲ್ಲ, ಅವು ಎಷ್ಟು ಬೀಜೋತ್ಪಾದನೆ ಮಾಡಬೇಕೋ ಅಷ್ಟು ಮಾಡುತ್ತಿಲ್ಲ ಎಂದು ಮಾನ್ಯ ದೇವೇಗೌಡರು ಹೇಳಿದರು. ಈಗ ಸರ್ಕಾರದ ಒಂದು ಫಾರಂನ್ನು 25 ಎಕರೆಯಲ್ಲಿ ಪ್ರಾರಂಭ ಮಾಡುತ್ತೇವೆಂದು ಇಟ್ಟುಕೊಳ್ಳೋಣ; ಅಲ್ಲಿ ಒಂದೇ ವರ್ಷದಲ್ಲಿ ಅಧಿಕ ಬೀಜೋತ್ಪಾದನೆ ಮಾಡುವುದಕ್ಕಾಗುವುದಿಲ್ಲ; ಏಕೆಂದರೆ, ಅಲ್ಲಿ ಹಳ್ಳ ತಿಟ್ಟು ಇದ್ದರೆ, ಅದನ್ನೆಲ್ಲಾ ಹಂತಹಂತವಾಗಿ ಲೆವಲ್ ಮಾಡಿ, ಭೂಮಿಯನ್ನು ಫಲವತ್ತಾಗಿ ಮಾಡಲು ಕೆಲವು ಕಾಲ ಬೇಕಾಗುತ್ತದೆ. ಈ ಬಗ್ಗೆ ಕೆಲವು ಅಂಕಿಅಂಶಗಳನ್ನು ಈಗ ಕೊಡುತ್ತೇನೆ.

In order to watch the working of each farm, the grading of seed farms on the basis of receipts and its expenditure is being watched. The farms are graded into 4 categories :

A Grade : Farms meeting cost of cultivation plus establishment plus Managers pay.

B Grade : Farms meeting, cost of cultivation plus establishment but not Managers pay.

C Grade : Farms meeting cost of cultivation, but not establishment and Managers pay.

D Grade : Farms not meeting cultivation expenditure and establishment and Managers pay,

The gradation of the farms for the last four years is given below:

Sl. No.	Grade	Number of farms 1970-71	1971-72	1972-73	1973-74	
1.	A	18	22	22	27	Increase from 18 to 27
2.	B	15	19	18	22	,, 15 to 22
3.	C	5	2	...	5	*Statusquo*
4.	D	23	18	23	9	Decrease from 23 to 9.

ಈಗ ಈ ಫಾರಂಗಳನ್ನು ಸೆಲ್ಫ್ ಸಪೋರ್ಟಿಂಗ್ ತರಹ ಮಾಡಬೇಕೆಂದರೆ ಮತ್ತು ಲಾಭ ಬರುವಂತೆ ಮಾಡಬೇಕೆಂದರೆ ಕೇವಲ 25 ಎಕರೆ ಭೂಮಿಯಲ್ಲಿ ಸಾಧ್ಯವಾಗುವುದಿಲ್ಲ ; ಈ ಕಾರಣದಿಂದ ಈಗ ಎಲ್ಲೆಲ್ಲಿ ಫಾರಂಗಳನ್ನು ಮಾಡಲಾಗಿದೆ, ಆ ಫಾರಂಗಳ ಪಕ್ಕದಲ್ಲಿರುವ ಜಮೀನನ್ನು ಸಹ ಪಡೆದುಕೊಂಡು ಹೆಚ್ಚಿನ ಪ್ರಮಾಣದಲ್ಲಿ ಬೀಜೋತ್ಪಾದನೆ ಮಾಡಬೇಕೆಂದು ಮತ್ತು ಆ ಮೂಲಕ ಎಫಿಷಿಯೆಂಟ್ ಆಗಿ ಕೆಲಸ ಮಾಡಬೇಕೆಂದಿದ್ದೇವೆ.

ಇನ್ನು ಕ್ರಿಮಿನಾಶಕ ಔಷಧಿಗಳ ಬೆಲೆ ಹೆಚ್ಚು ಆಗಿದೆ ಮತ್ತು ಒಂದು ಕಡೆ ಹತ್ತು ಪಟ್ಟಷ್ಟು ಹೆಚ್ಚು ಬೆಲೆಯಲ್ಲಿ ಮಾರುತ್ತಿದ್ದಾರೆ ; ಗೊಬ್ಬರ ಮತ್ತು ಕ್ರಿಮಿನಾಶಕ ವಸ್ತುಗಳಲ್ಲಿ ಅಡಲ್ಟ್ರೇಷನ ಆಗುತ್ತಿದೆ ಎಂದು ಹೇಳಿದ್ದಾರೆ.

ಶ್ರೀ ಹೆಚ್. ಡಿ. ದೇವೇಗೌಡ.—ಗುಲ್ಬರ್ಗದಲ್ಲಿ ಇಲಿ ಹಿಡಿದರೆ ಎರಡು ರೂಪಾಯಿ ಕೊಡುತ್ತೇವೆ ಎಂದು ಹೇಳಿದ್ದರು. ಔಷಧಿ ಹೊಡೆದರೆ ಇಲಿಗಳು ಸಾಯುಲಲ್ಲ.

ಶ್ರೀ ಎನ್. ಚಿಕ್ಕೇಗೌಡ.—ಬೀದರ ಗುಲ್ಬರ್ಗ ಮುಂತಾದ ಕಡೆಗಳಲ್ಲಿ ಹೊಗೆಯಿಂದ ಅವುಗಳನ್ನು ಸಾಯಿಸಲು ಪ್ರಯತ್ನ ಮಾಡಿದೆವು. ಅದು ಪರಿಣಾಮಕಾರಿಯಾಗಿ ಯಶಸ್ವಿಯಾಯಿತು.

ಅಧ್ಯಕ್ಷರು.—ಮಾನ್ಯ ದೇವೇಗೌಡರು ಹೇಳುತ್ತಿರುವುದು, ಸ್ಪ್ರೇ ಮಾಡಿದರೂ ಇಲಿಗಳು ಸಾಯುಲಿಲ್ಲ ಎಂದು. ಸ್ಪ್ರೇ ಮಾಡಿದರೆ ಇಲಿಗಳು ಸಾಯುತ್ತವೆಯೋ ?

ಶ್ರೀ ಎನ್. ಚಿಕ್ಕೇಗೌಡ.—ಇನ್ನು ಟೆಕ್ನಿಕಲ್ ಮೆಟೀರಿಯಲ್ಸ್ ಬಗ್ಗೆ ಹೇಳಿದರು. ಇದನ್ನು ನಮ್ಮ ಕೇಂದ್ರ ಸರ್ಕಾರದವರು ಎಸ್. ಪಿ. ಸಿ, ಅವರಿಂದ ಇಂಪೋರ್ಟ್ ಮಾಡಿಕೊಂಡಿದ್ದಾರೆ. ಅದನ್ನು ಬರೀ ವ್ಯಾಪಾರಸ್ಥರಿಗೆ ಇಂಡಿವಿಜುಯಲ್ ಆಗಿ ಮೊದಲು ಕೊಡುತ್ತಿದ್ದರು. ಈಗ ಅದನ್ನು ತಪ್ಪಿಸಿ ನಮ್ಮ ವ್ಯವಸಾಯ ಇಲಾಖೆಯಿಂದ 50 ಪರ್ಸೆಂಟ್ ಕೊಡಬೇಕೆಂದು ಮಾಡಿದ್ದೇವೆ. ಮಾರ್ಕೆಟಿಂಗ್ ಫೆಡರೇಷನ್‌ನವರು ಯೂನಿಟ್ಸನ್ನು ಈಗಾಗಲೇ ಹಾಕಿಕೊಂಡಿದ್ದಾರೆ. ಅಗ್ರೋ ಇಂಡಸ್ಟ್ರೀಸ್‌ನಲ್ಲಿ ಯೂನಿಟ್ ಹಾಕಲು ಸಿದ್ಧತೆಗಳು ನಡೆಯುತ್ತಾ ಇವೆ. ಇದನ್ನು ಫರ್ದರ್ ಪ್ರೊಸೆಸ್ ಮಾಡಿ, ನ್ಯಾಯವಾದ ಬೆಲೆಯಲ್ಲಿ ಇದನ್ನು ರೈತರಿಗೆ ಮಾರಾಟ ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ. ಇವತ್ತಿನ ದಿವಸ ಕ್ರಿಮಿನಾಶಕ ವಸ್ತುಗಳು ಏನು ಇವೆ, ಅವುಗಳ ಬೆಲೆ ಹೆಚ್ಚು ಆಗಿರತಕ್ಕದ್ದು ಮುಖ್ಯವಾಗಿ ಅದಕ್ಕೆ ಪೆಟ್ರೋಲ್ ಕೆಮಿಕಲ್ಸ್ ಉಪಯೋಗಿಸುವುದರಿಂದ ಬೆಲೆ ಹೆಚ್ಚಾಗಿದೆ. ಅದರ ಗುಣದ ಬಗ್ಗೆ ಅನೇಕ ಕಡೆ ಅಡಲ್ಟ್ರೇಷನ್ ಮಾಡಿ ಮಾರುತ್ತಾರೆ ಎಂದು ಏನು ದೂರು ಇದೆ, ಅದರ ಬಗ್ಗೆ ತೀವ್ರವಾಗಿ ಕ್ರಮ ತೆಗೆದುಕೊಳ್ಳುತ್ತೇವೆ. ಎಲ್ಲೆಲ್ಲಿ ಮಾರುತ್ತಾರೆ, ಅಂತಹ ಕಡೆಗಳಲ್ಲಿ ಇದರ ಸ್ಯಾಂಪಲ್ ತರಿಸಿ, ಲ್ಯಾಬರೋಟರಿಯಲ್ಲಿ ಟೆಸ್ಟ್ ಮಾಡಿಸಿ, ಅಡಲ್ಟ್ರೇಷನ್ ಏನಾದರೂ ಮಾಡಿದ್ದರೆ, ಅವರ ಮೇಲೆ ತೀವ್ರವಾದ ಕ್ರಮ ತೆಗೆದುಕೊಳ್ಳುವುದಕ್ಕೆ ತೀರ್ಮಾನ ಮಾಡಿದ್ದೇವೆ.

ಮಾನ್ಯ ವಿರೋಧ ಪಕ್ಷದ ನಾಯಕರು ಗುಲ್ಬರ್ಗಾದಲ್ಲಿದ್ದ ಇಲಿಗಳ ಹಾವಳಿ ಬಗ್ಗೆ ಪ್ರಸ್ತಾಪ ಮಾಡಿದರು. ಅಲ್ಲಿ ಪರಿಸ್ಥಿತಿ ಏನಿತ್ತು ಎಂದರೆ, ಸಾಮಾನ್ಯವಾದಂಥ ಒಂದು ಹೆಗ್ಗಣ ತನ್ನ ಬಿಲ ದೊಳಗೆ ಐದು ಕೇಜಿ ಕಾಳನ್ನು ಇಟ್ಟುಕೊಂಡು ಶೇಖರಣೆ ಮಾಡುತ್ತಿದ್ದವು. 1972-73ರಲ್ಲಿ ಆ ಭಾಗಗಳಲ್ಲಿ ಅಭಾವ ತಲೆದೋರಿತ್ತು. ಈಗ ಅಲ್ಲಿ ಇಲಿಗಳ ತೊಂದರೆ ಇಲ್ಲ. ಇಲಿಗಳ ಕಾಟವಿರುವ ಕಡೆಗಳಲ್ಲೆಲ್ಲಾ ಕೆಮಿಕಲ್ಸ್ ಕೊಟ್ಟಿದ್ದೆವು. ಹೊಗೆಯಿಂದ ಕೂಡ ಅವುಗಳನ್ನೂ ನಾಶಗೊಳಿಸಲು ಪ್ರಯತ್ನ ಮಾಡಲಾಯಿತು. ನಮ್ಮ ಊರಿನ ಹತ್ತಿರ 2-3 ಕಡೆ ತೋರಿಸಿದೆ, ಅಲ್ಲಿ 60 ಅಡಿ ಉದ್ದ ಬಿಲ ಮಾಡಿಕೊಂಡು ಹೋಗಿ ಒಂದು ಕಡೆ ತಡೆ ಹಾಕಿಕೊಂಡಿರುತ್ತವೆ. ಅಲ್ಲಿ ಕಂಪೆನಿಯವರು ಫ್ಯೂಮಿಗೇಷನ್ ಪ್ರೊಸೆಸ್‌ನ್ನು ಉಪಯೋಗಿಸಿದರು. ನಾನು ಮೊದಲು ಅದನ್ನು ನಂಬಲಿಲ್ಲ. ಮೊದಲು ಸ್ಪ್ರೇ ಮಾಡಿದರೆ ಸಾಯಲಿಲ್ಲ. ಆಮೇಲೆ ಬಿಲವನ್ನು ತೆಗೆದುನೋಡಿದರೆ ಎರಡು ನಿಮಿಷದಲ್ಲಿ ಅಲ್ಲಿರುವ ಇಲಿಗಳೆಲ್ಲಾ ಸತ್ತಿದ್ದವು. ಈ ಒಂದು ಪ್ರೊಸೆಸ್ ಬಹಳ ಪರಿಣಾಮಕಾರಿ ಯಾಗಿದೆ.

ಶ್ರೀ ಕೋಣಂದೂರು ಲಿಂಗಪ್ಪ.—ಇಲಿ ಹೊಡೆಯುವುದಕ್ಕೆ ಆಗುವುದಿಲ್ಲ. ಅವುಗಳು ಕಾಂಗ್ರೆಸ್ ಇದ್ದಹಾಗೆ ಇರುತ್ತವೆ.

ಶ್ರೀ ಎನ್. ಚಿಕ್ಕೇಗೌಡ.—ಇಲಿ ಹೊಡೆಯುವುದಕ್ಕೆ ಆಗುವುದಿಲ್ಲ ; ಸಾಯಿಸಬಹುದು. ಮಾನ್ಯ ಲಿಂಗಪ್ಪನವರು ಎಲ್ಲದರಲ್ಲೂ ರಾಜಕೀಯ ಮಾಡುತ್ತಾ ಇದ್ದಾರೆ. ನಮ್ಮ ದೇಶದ ಇಲಿಗಳು ಮಳಿಗೆಯಲ್ಲಿ ಮತ್ತು ದಾಸ್ತಾನು ಮಾಡತಕ್ಕ ಸ್ಥಳಗಳಲ್ಲಿ ಧಾನ್ಯವನ್ನು ಎಷ್ಟು ನಷ್ಟ ಮಾಡುತ್ತಿವೆ ಎಂದರೆ, ಟೋಟಲ್ ಪ್ರೊಡಕ್ಷನ್‌ನಲ್ಲಿ 10 ಪರ್ಸೆಂಟ್ ಧಾನ್ಯಗಳನ್ನು ಈ ಇಲಿಗಳು ತಿಂದು ನಾಶಮಾಡುತ್ತಿವೆ. ನಮ್ಮ ದೇಶದಲ್ಲಿ ಈಗ ಇರತಕ್ಕದ್ದು 4-5 ಪರ್ಸೆಂಟ್ ಫುಡ್ ಡಿಫಿಸಿಟ್ ಆದುದರಿಂದ, ಇಲಿಗಳ ಕಾಟವನ್ನು ತಡೆಗಟ್ಟುವುದಕ್ಕೆ ಮತ್ತು ಕ್ರಿಮಿಕೀಟಗಳನ್ನು ನಾಶಗೊಳಿಸುವ ಬಗ್ಗೆ 8ಲಕ್ಷ ರೂಪಾಯಿಗಳನ್ನು ಕೊಟ್ಟಿದೆ. ಬಹುಶಃ ಇಲಿಗಳ ಕಾಟ ಇನ್ನೂ ಜಾಸ್ತಿ ಆದರೆ, ಈ ಯೋಜನೆಯನ್ನು ಮುಂದುವರಿಸಬೇಕೆಂಬ ಇಚ್ಛೆ ಸರಕಾರಕ್ಕೆ ಇದೆ.

ಇನ್ನು ಭೂಸಂರಕ್ಷಣಾ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ. ನಮ್ಮ ರಾಜ್ಯದಲ್ಲಿ ಇದುವರೆಗೆ 21,04,00,000 ರೂಪಾಯಿಗಳನ್ನು ಈ ಯೋಜನೆಯಲ್ಲಿ ಒಡ್ಡುಗಳನ್ನು ಹಾಕುವುದಕ್ಕಾಗಿ ಮಾಡಿದ್ದೇವೆ.

ಶ್ರೀ ಕೋಣಂದೂರು ಲಿಂಗಪ್ಪ.—ಇಲಿಗಳು ಭತ್ತ ಕಾಳು ಕಡ್ಡಿ ತಂದು ಏನು ನಾಶಮಾಡು ತವೆ. ಅವುಗಳ ಬಗ್ಗೆ ಗಾಂಧೀಜಿಯವರು ಹೇಳಿದ್ದರು ; ಹಾವುಗಳನ್ನು ರಕ್ಷಣೆ ಮಾಡಬೇಕು ; ಈ ಹಾವುಗಳಿಗೆ ಕ್ಷೇತ್ರಪಾಲಕ ಎಂದೂ ಮಾಡಿದ್ದರು. ಇದು ಮೂಲಭೂತವಾದ ಈ ವಿಷಯ ; ಇದರ ಬಗ್ಗೆ ತಾವು ಯೋಚನೆ ಮಾಡಬೇಕು.

ಶ್ರೀ ಜಿ. ರಾಮೇಗೌಡ.—ಹಾಗೇನಾದರೂ ಹಾವುಗಳ ಅಭಿವೃದ್ಧಿ ಮಾಡುವುದಾದರೆ, ಅದನ್ನು ದಯವಿಟ್ಟು ಲಿಂಗಪ್ಪನವರ ತಾಲ್ಲೂಕಿನಲ್ಲಿ ಮಾಡಿ ; ನಮ್ಮ ಜಿಲ್ಲೆಯಲ್ಲಿ ಬೇಡ.

ಶ್ರೀ ಕೋಣಂದೂರು ಲಿಂಗಪ್ಪ.—ಇಲಿಗಳನ್ನು ತಿನ್ನುವುದು ನಾಗರ ಹಾವಲ್ಲ ; ಕೇರೆ ಹಾವು.

ಶ್ರೀ ಎನ್. ಚಿಕ್ಕೇಗೌಡ.—ಒಟ್ಟಿನಲ್ಲಿ ಭೂ ಸಂರಕ್ಷಣೆಗೋಸ್ಕರ 1974-75ನೇ ಸಾಲಿನಲ್ಲಿ 34,40,000 ಹೆಕ್ಟೇರುಗಳಲ್ಲಿ ಒಡ್ಡುಗಳನ್ನು ಹಾಕುವುದಕ್ಕೆ ನಾವು ಗುರಿ ಇಟ್ಟುಕೊಂಡಿದ್ದೆವು. ಇನ್ನೂ ಪೂರ್ತಿ ಆಗದೇ ಇರತಕ್ಕ 3,64,000 ಹೆಕ್ಟೇರುಗಳಲ್ಲಿ ಒಡ್ಡುಗಳನ್ನು ಸಂಪೂರ್ಣ ಮಾಡ ಬೇಕೆಂದು ಗುರಿ ಇಟ್ಟುಕೊಂಡಿದ್ದೇವೆ. ಅದರ ಪ್ರಕಾರ 37,399 ಹೆಕ್ಟೇರುಗಳಲ್ಲಿ ಹೊಸ ಒಡ್ಡು ಗಳನ್ನು ಹಾಕಿದ್ದೇವೆ. ಇನ್ನು ಇನ್‌ಕಂಪ್ಲೀಟ್ ಏನಿವೆ, ಅವುಗಳನ್ನು ಡಿಸೆಂಬರ್ 74ರಂದು ಪೂರ್ತಿ ಮಾಡಿದ್ದೇವೆ. ಇದಕ್ಕಾಗಿ 92,68,000 ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. 1975-76ನೇ ಸಾಲಿಗೆ 40 ಸಾವಿರ ಹೆಕ್ಟೇರ್‌ಗಳಲ್ಲಿ ಹೊಸ ಪ್ರದೇಶಗಳಲ್ಲಿ ಒಡ್ಡುಗಳನ್ನು ಹಾಕುವುದಕ್ಕೆ ಗುಲ್ಬರ್ಗ, ಬಿದರೆ, ರಾಯಚೂರು ಪ್ರದೇಶದಲ್ಲಿ ಒಡ್ಡು ಹಾಕುವ ಕೆಲಸ ಪೂರ್ತಿಗೊಳಿಸಬೇಕೆಂದು ತೀರ್ಮಾನ ಮಾಡಿದ್ದೇವೆ. ನಾನು ಈಗಾಗಲೇ ಹೇಳಿದ ಹಾಗೆ, 21,04,00,000 ರೂಪಾಯಿಗಳನ್ನು ಈ ಭೂಸಂರಕ್ಷಣಾ ಯೋಜನೆಗಾಗಿ ನಾವು ಖರ್ಚು ಮಾಡಿದ್ದೇವೆ. ಇನ್ನು 17,90,000 ಹೆಕ್ಟೇರುಗಳನ್ನು ಭೂಸಂರಕ್ಷಣಾ ಮಾಡಲು ಕಾರ್ಯಕ್ರಮ ತೆಗೆದುಕೊಂಡಿದ್ದೇವೆ. ಇನ್ನೂ ನಮ್ಮ ರಾಜ್ಯದಲ್ಲಿ 50,50,000 ಹೆಕ್ಟೇರುಗಳಲ್ಲಿ ಭೂಸಂರಕ್ಷಣೆಯನ್ನು ತೆಗೆದುಕೊಳ್ಳಬೇಕಾಗಿದೆ. ಇಲ್ಲಿ ಮುಖ್ಯವಾಗಿ ಹಣದ ಕೊರತೆ ಇದೆ. ಈ ದಿಶೆಯಲ್ಲಿ ಹೆಚ್ಚು ಕೆಲಸವನ್ನು ಮಾಡಬೇಕೆಂಬ ಇಚ್ಛೆ ಸರಕಾರಕ್ಕೆ

ಇದೆ. ಈ ಇನ್‌ಕಂಪ್ಲೀಟ್ ವರ್ಕ್‌ನ್ನು ಪೂರ್ಣಗೊಳಿಸುವುದು ಮತ್ತು ಹೊಸ ಪ್ರದೇಶಗಳನ್ನು ಪೂರ್ಣ ವೇಗದಲ್ಲಿ ತೆಗೆದುಕೊಳ್ಳುವುದಕ್ಕೆ ಮಾನ್ಯ ಹಣಕಾಸಿನ ಮಂತ್ರಿಗಳನ್ನು ಒತ್ತಾಯ ಮಾಡುತ್ತೇನೆ. ಈಗ ನಮ್ಮ ಇಲಾಖೆಯಲ್ಲಿ 67ರಲ್ಲಿ ರೀಆರ್ಗನೈಜೇಷನ್ ಆಗಿ, ಸಬ್ ಡಿವಿಜನಲ್, ಅಸಿಸ್ಟೆಂಟ್ ಡೈರೆಕ್ಟರ್, ಜಿಲ್ಲಾ ಮಟ್ಟದಲ್ಲಿ ಡೆಪ್ಯುಟಿ ಡೈರೆಕ್ಟರ್, ಜಾಯಿಂಟ್ ಡೈರೆಕ್ಟರ್ ಡಿವಿಜನಲ್ ಮಟ್ಟದಲ್ಲಿ ಇರುವುದರಿಂದ ಹೆಚ್ಚು ಪರಿಣಾಮಕಾರಿಯಾಗಿ ಕೆಲಸ ಆಗಬೇಕೆಂಬ ದೃಷ್ಟಿಯಿಂದ ಒಂದೊಂದು ತಾಲ್ಲೂಕಿಗೆ ಒಬ್ಬೊಬ್ಬ ಅಸಿಸ್ಟೆಂಟ್ ಡೈರೆಕ್ಟರ್ ಎಂದು ನೇಮಿಸಿ, ಅವರಿಗೆ ಜವಾಬ್ದಾರಿ ವಹಿಸಿ, ವ್ಯವಸಾಯದ ಎಲ್ಲಾ ವಿಷಯಗಳಲ್ಲೂ ಉಸ್ತುವಾರಿ ಮಾಡಬೇಕೆಂದು ಹೇಳಿದ್ದೇವೆ. ಇನ್ನೂ ಹೆಚ್ಚು ಪೋಸ್ಟ್‌ಗಳನ್ನು ಕ್ರಿಯೇಟ್ ಮಾಡುವುದಿಲ್ಲ.

5-30 P.M.

ಶ್ರೀ ಕೋಣಂದೂರು ಲಿಂಗಪ್ಪ.—ನೀವು ಹಾಕತಕ್ಕ ಅಸಿಸ್ಟೆಂಟ್ ಡೈರೆಕ್ಟರುಗಳು ತಾಲ್ಲೂಕ ಬೋರ್ಡ್‌ಗಳ ಎಕ್ಸ್‌ಟೆನ್‌ಷನ್ ಆಫೀಸರ್ ಹಾಗೆ ಕೂರುತ್ತಾರೆ ಏನು.

ಶ್ರೀ ಎನ್. ಚಿಕ್ಕೇಗೌಡ.—ಅವರು ಕೂತುಕೊಳ್ಳಕೂಡದು, ಪರಿಣಾಮಕಾರಿಯಾಗಿ ಕೆಲಸ ಮಾಡಬೇಕು, ಸೂಪರ್‌ವೈಸ್ ಮಾಡಬೇಕು ಎನ್ನತಕ್ಕದ್ದು ಸರ್ಕಾರದ ಇಚ್ಛೆ. ಈಗ ರೀ ಆರ್ಗನೈಜೇಷನ್ ಮಾಡತಕ್ಕದ್ದು ಅವರು ಹೆಚ್ಚು ಪರಿಣಾಮಕಾರಿಯಾದ ಜವಾಬ್ದಾರಿಯನ್ನು ಹೊರಬೇಕು ಎಂದು ಎ.ಇ.ಓ.ಗಳು ಹೋಗಿ ಇನ್‌ಸ್ಟ್ರಕ್ಷನ್ ಕೊಡುವುದು, ಇದೆಲ್ಲ ಆಗಕೂಡದು ಎಂದು ಹೇಳಿ ಇರತಕ್ಕ ಸಿಬ್ಬಂದಿಯಲ್ಲಿ ಹೆಚ್ಚು ಹಣ ಖರ್ಚುಮಾಡಿ ಸಿಬ್ಬಂದಿಗೆ ಹೆಚ್ಚು ಜವಾಬ್ದಾರಿ ಹೊರಿಸಬೇಕು ಎಂದು ರೀ ಆರ್ಗನೈಜೇಷನ್ ಮಾಡಬೇಕಾಗಿದೆ. ಈಗ ವ್ಯವಸಾಯದ ಅಭಿವೃದ್ಧಿಗೆ ಸರ್ಕಾರದಲ್ಲಿ ಪರಿಶೀಲಿಸುತ್ತಾ ಇದ್ದೇವೆ. ಸಂಶೋಧನೆಯಲ್ಲಿ ಹೆಚ್ಚು ಫಲ ಮತ್ತು ವ್ಯವಸಾಯದಲ್ಲಿ ತೀವ್ರ ಪ್ರಗತಿಯಾಗಬೇಕಾಗಿದೆ. ಸ್ಪೆಷಲಿಸ್ಟ್ ಬ್ರಾಂಚ್‌ನಲ್ಲಿ ಇರತಕ್ಕ ಕೆಲವರಿಗೆ ವಿದ್ಯಾರ್ಹತೆ ಸಾಲದು, ಅನೇಕರು ಎಲ್.ಎ.ಜಿ. ಮಾಡಿಕೊಂಡಿರುತ್ತಾರೆ, ಅದಕ್ಕೋಸ್ಕರ ಮಾನ್ಯ ದೇವೇಗೌಡರು ಹೇಳಿದರು ಇದಕ್ಕೆ ಹೆಚ್ಚು ಪರಿಣತೆ ಹೊಂದಿದವರನ್ನು ಹಾಕಬೇಕು ಎಂದು. ಅದಕ್ಕೋಸ್ಕರ ಈಗ ಡೈರೆಕ್ಟ್ ರೆಕ್ರೂಟ್‌ಮೆಂಟ್ ಮಾಡಿ ಅಡ್‌ವಾನ್ಸ್‌ಡ್ ಕೋರ್ಸ್‌ನಲ್ಲಿ ಪೋಸ್ಟ್ ಗ್ರಾಜುಯೇಟ್ ಆಗಿರತಕ್ಕವರನ್ನು ಹಾಕಬೇಕು ಎಂದು ಸರ್ಕಾರದವರ ಗಮನದಲ್ಲಿ ಇದೆ. ಆದುದರಿಂದ ಹೆಚ್ಚಿಗೆ ವ್ಯವಸಾಯದಲ್ಲಿ ಸಂಶೋಧನೆಯಿಂದ ಚೆನ್ನಾಗಿ ತಿಳಿದುಕೊಂಡು ರೈತನ ಮನೆ ಬಾಗಿಲಿಗೆ ಈ ಅನುಭವವನ್ನು ಮುಟ್ಟಿಸಬೇಕೆಂಬ ಗುರಿ ಇದೆ. ಈ ದೃಷ್ಟಿಯಿಂದ ವಿಸ್ತರಣಾ ಅಧಿಕಾರಿಗಳು ವ್ಯವಸಾಯ ಇಲಾಖಾ ಅಧಿಕಾರಿಗಳು, ಈ ಇಬ್ಬರು ಪರಿಣತರಾದಂಥ ಅಧಿಕಾರಿಗಳಿಗೆ ಹೆಚ್ಚು ಜವಾಬ್ದಾರಿ ಹೊರಿಸಬೇಕು ಎನ್ನುವುದು ಸರ್ಕಾರದ ಮುಂದೆ ಇದ್ದು ಇದು ತೀವ್ರ ಪರಿಶೀಲನೆಯಲ್ಲಿ ಇದೆ. ಇದೇ ರೀತಿಯಲ್ಲಿ ವ್ಯವಸಾಯ ಮತ್ತು ಕೃಷಿ ಇಲಾಖೆಯು ಪರಿಣತರಿಂದ ಪಡೆದಂಥ ಸಂಶೋಧನ ಫಲವನ್ನು ರೈತರಿಗೆ ಮುಟ್ಟಿಸಬೇಕಾದರೆ ವ್ಯವಸಾಯ ಇಲಾಖಾ ಅಧಿಕಾರಿಗಳು, ಕೃಷಿ ಸಂಶೋಧನ ಅಧಿಕಾರಿಗಳು, ಇವರೆಲ್ಲರೂ ಶೀಘ್ರವಾಗಿ ಕೆಲಸ ಮಾಡಬೇಕು. ಅಲ್ಲದೆ ಈ ಬಗ್ಗೆ ಯೂನಿವರ್ಸಿಟಿ ಮತ್ತು ಡಿಪಾರ್ಟ್‌ಮೆಂಟ್ ಸಹ ಒಂದಕ್ಕೊಂದು ಕೋ ಆರ್ಡಿನೇಷನ್ ಇರಬೇಕು ಎಂದು ಮೆಮೋರಾಂಡಮ್ ತಯಾರುಮಾಡಿ ಪರಿಣಾಮಕಾರಿಯಾಗಿ ಸಹಕಾರದಿಂದ ಕೆಲಸ ಮಾಡುವುದಕ್ಕೆ ಅವಕಾಶ ಮಾಡಬೇಕು ಎಂದು ಸರ್ಕಾರದಲ್ಲಿ ಯೋಚಿಸಿದ್ದೇವೆ. ಆದ್ದರಿಂದ ಇದರ ಬಗ್ಗೆ ಜಾಗ್ರತೆ ತೀರ್ಮಾನ ತೆಗೆದುಕೊಂಡು ತೀವ್ರವಾಗಿ ಪರಿಶೀಲಿಸಿ ಪರಿಣಾಮಕಾರಿಯಾಗುವಂತೆ ಈ ಎರಡು ಇಲಾಖೆಗಳಲ್ಲಿ ಕೋಆರ್ಡಿನೇಷನ್ ಇರುವಂತೆ ಮಾಡಬೇಕು ಎಂದು ಮಾಡಿದ್ದೇವೆ. ಮಾನ್ಯ ಬಂಗಾರಪ್ಪನವರು ಸಹ ಇದರ ಬಗ್ಗೆ ತಿಳಿಸಿದ್ದಾರೆ.

ಶ್ರೀ ಜಿ. ರಾಮೇಗೌಡ.—ಸ್ವಾಮಿ, ಈ ಸಾಯಿಲ್ ಕನ್‌ಸರ್‌ವೇಷನ್ ಬಗ್ಗೆ ಕಪ್ಪು ಭೂಮಿಯ ಮೇಲೆ ಸಂಶೋಧನೆ ನಡೆಸಿ ತಜ್ಞರ ಸಮಿತಿಯಿಂದ ರಿಪೋರ್ಟ್ ತರಿಸಿಕೊಂಡು ಅದರಂತೆ ಕೆಲಸ ಮಾಡುತ್ತೀರಿ, ಅದೇರೀತಿ ಕೆಂಪು ಭೂಮಿ ಮೇಲೆ ಸಂಶೋಧನೆ ನಡೆಸಿ ಅದರ ಮೇಲೆ ರಿಪೋರ್ಟ್ ಇಟ್ಟುಕೊಂಡು ಯಾವ ಕ್ರಮ ಮಾಡುತ್ತಾ ಇಲ್ಲ ಎಂದು ತಿಳಿದುಬಂದಿದೆ, ಇದು ನಿಜಾಂಶ, ಹಾಗೇನಾದರು ಇದ್ದರೆ ಕೆಂಪು ಭೂಮಿಯಲ್ಲಿ ಸಂಶೋಧನೆಗೆ ಏನಾದರು ಏರ್ಪಾಡು ಮಾಡುತ್ತೀರಾ ?

ಶ್ರೀ ಎನ್. ಚಿಕ್ಕೇಗೌಡ.—ಮುಖ್ಯವಾಗಿ ಏನು ವಿಚಾರ ತಿಳಿಸುತ್ತಿದ್ದೀರಿ, ಅದು ಸಾಯಿಲ್ ಕನ್‌ಸರ್‌ವೇಷನ್ ಬಗ್ಗೆ ಬರುತ್ತದೆ. ಸಾಯಿಲ್ ಕನ್‌ಸರ್‌ವೇಷನ್ ಏನಾಗಿದೆ, ಅಕಾರ್ಡಿಂಗ್ ಟು ಕಾಂಟೂರ್ ಲೆವೆಲ್ ಏನು ಇದೆ ಅದರ ಪ್ರಕಾರ ರೈತರು ಒಡ್ಡುಗಳನ್ನು ಹಾಕುವುದಕ್ಕೆ ಹೋದರೆ ಅವಕಾಶ ಮಾಡಿಕೊಡುವುದಿಲ್ಲ.

ಶ್ರೀ ಕೆ. ಹೆಚ್. ಹನುಮೇಗೌಡ.—ಈಗ ಕಾಂಟೂರ್ ಹಾಕುವುದಕ್ಕೆ ರೈತರು ಅವಕಾಶ ಕೊಡುವುದಿಲ್ಲ ಎಂದು ಹೇಳಿದಿರಿ, ಅವರಿಗೆ ಇರತಕ್ಕ ಹೊಲಗಳನ್ನು ತಮ್ಮವರು ಹೋಗಿ ಯದ್ವಾ ತದ್ವಾ ಕಡಿದು ಅದ್ವಾನ ಮಾಡಿದ್ದಾರೆ. ಕಾಂಟೂರ್ ಬಂಡ್ಸ್ ಮಾಡುವಾಗ 100 ಅಡಿ ಮತ್ತು 6 ಇಂಚುಗಳ ಒಂದು ಸ್ಲೋಪ್ ಆಗಿ ಮಾಡಿದರೆ ಚೆನ್ನಾಗಿ ಇರುತ್ತದೆ ಆದು ಬಿಟ್ಟು ಸೂಪರ್‌ವೈಸ್ ಮಾಡುವವರು ಯಾರನ್ನೋ ಆಳುಗಳನ್ನು ಕರೆದುಕೊಂಡು ಹೋಗಿ ಹೇಳುತ್ತಾರೆ. ಆ ಆಳುಗಳು ಒಂದು ಕಿತ್ತಾರ ಕಡಿದು ದಿಣ್ಣೆಗೆ ಹಾಕುತ್ತಾನೆ. ಹೀಗಾಗಿ ಆ ಹೊಲ ಎಲ್ಲಾ ಅಧ್ವಾನ ಮಾಡಿಬಿಡುತ್ತಾರೆ, ಮಳೆಗಾಲ ಬಂದರೆ ಸಾಕು, ಅದರಲ್ಲಿ ನೀರು ನಿಂತುಕೊಂಡು ಹೊಲ ಎಲ್ಲ ಹಾಳಾಗಿ ಹೋಗುತ್ತದೆ ಇವರು ಮಾಡಿರುವ ಕೆಲಸದಿಂದ ಆ ಭಾಗದಲ್ಲಿರುವ ಪೈರುಗಳೆಲ್ಲಾ ಹಾಳಾಗಿ ಹೋಗುತ್ತವೆ, ಇವರನ್ನು ಅಲ್ಲಿಯ ಜನರು ಹೊಡೆಯದೇ ಬಿಟ್ಟಿರುವುದು ಇವರ ಪುಣ್ಯ. ಇವರು ಮಾಡುವ ಕೆಲಸವನ್ನು ಒಳ್ಳೆಯ ರೂಪದಲ್ಲಿ ಮಾಡಿದರೆ ರೈತರಿಗೆ ಅನುಕೂಲವಾಗುತ್ತದೆ. ಅದನ್ನು ಬಿಟ್ಟು ತಾವು ಇಲ್ಲಿ ಲಕ್ಷಗಟ್ಟಲೆ ಅಂಕಿ ಓದಿದರೆ ಅನುಕೂಲವಾಗುವುದಿಲ್ಲ. ಅಮೆರಿಕಾ ಸಿಸ್ಟಂ ಪ್ರಕಾರ ಕಾಂಟೂರ್ ಬಂಡ್ ಹಳ್ಳಿಗಳಲ್ಲಿ ಕೆಲವು ಎಕರೆಗಳಿಗೆ ಮಾಡಿಸಿ, ಒಂದು ಆ್ಯವರೇಜ್ ಸೈಜ್ ಫಾರಮ್ ಮಾಡಿ 20–30 ಎಕರೆಗೆ ಒಂದು ಆ್ಯವರೇಜ್ ಬಂಡ್ಸ್ ಮಾಡಿ.

ಶ್ರೀ ಎನ್. ಚಿಕ್ಕೇಗೌಡ.—ಮಾನ್ಯ ಹನುಮೇಗೌಡರು ಆ್ಯವರೇಜ್ ಸೈಜ್ ಫಾರಂ ಮಾಡಬೇಕೆಂದು ಹೇಳಿರತಕ್ಕ ಸಲಹೆಯನ್ನು ಒಪ್ಪತಕ್ಕದ್ದು ಆದರೆ ಗ್ರೇಡೆಡ್ ಬಂಡ್ಸ್ ಎಂದು ಹೇಳುತ್ತಾರೆ. ಅದರ ಪ್ರಕಾರ ಕಾರ್ಯಗತ ಮಾಡಬೇಕಾದರೆ ಈಗ 10 ಗುಂಟೆ 1 ಎಕರೆ ಇರುವ ಕಡೆ ಕಾಂಟೂರ್ ಬಂಡ್ಸ್ ಎಂದರೆ ಹೊಲ ಎಲ್ಲ ಬದ ಬಿದ್ದು ಹೋಗುತ್ತದೆ.

ಶ್ರೀ ಕೆ. ಹೆಚ್. ಹನುಮೇಗೌಡ.—ಈಗ ಹೆಚ್ಚಿಗೆ ಜಮೀನು ಇರುವವರಿಗೆ ಮೊದಲು ಮಾಡಿ, 10 ಗುಂಟೆ, ಒಂದು ಎಕರೆ ಇರುವವರ ಬಳಿ ಹೋಗಬೇಡಿ ಅವರು ಶ್ರದ್ಧೆಯಿಂದ ಕೆಲಸ ಮಾಡಿಕೊಳ್ಳುತ್ತಾರೆ. ಇವರು ಹೋಗಿ ಅಲ್ಲಿ ಯದ್ವಾತದ್ವಾ ಮಾಡುವುದು ಬೇಡ. ಇವರು ಮಾಡಿರುವುದು ಒಂದು ಒಳ್ಳೆಯ ವ್ಯವಸಾಯ ರೀತಿಯಲ್ಲಿ ಇರುವುದಿಲ್ಲ, ಅದನ್ನು ಸಿಕ್ಕಾಪಟ್ಟೆ ಅದ್ವಾನ ಮಾಡಿರುತ್ತಾರೆ. ಆದ್ದರಿಂದ ದಯಮಾಡಿ ಒಂದು, ಎರಡು ಎಕರೆ ಜಮೀನು ಇರುವವರು ಶ್ರದ್ಧೆಯಿಂದ ನೋಡಿಕೊಂಡು ಅವರೇ ಕೆಲಸ ಮಾಡಿಕೊಳ್ಳುತ್ತಾರೆ, ನಿಮ್ಮವರು ಯಾರೂ ಅಲ್ಲಿಗೆ ಹೋಗಬೇಕಾಗಿಲ್ಲ,

ಶ್ರೀ ಎನ್. ಚಿಕ್ಕೇಗೌಡ.—ಮಾನ್ಯ ಹನುಮೇಗೌಡರು ಹೇಳಿದ ರೀತಿ ಮಾಡುವುದಕ್ಕೆ ಹೋದರೆ ಕಾಂಟೂರ್ ಬಂಡ್ಸ್ it must be contigues ಒಬ್ಬರ ಜಮೀನನ್ನು ಮಾಡಿ ಇನ್ನೊಬ್ಬರ ಜಮೀನನ್ನು ಮಾಡದೇ ಹೋದರೆ, ಆಗ ಎರಡೂ ಜಮೀನು ಹಾಳಾಗಿ ಹೋಗುತ್ತದೆ. ಈಗ ನೂರಾರು ಎಕರೆಗೆ ಬಂಡ್ಸ್ ಹಾಕಬೇಕಾದರೆ ಅದರ ಉದ್ದೇಶ ಏನು ಎಂದರೆ ಅಲ್ಲಿ ಬಿದ್ದಂಥ ನೀರು ಜರುಗದೆ ಅಲ್ಲಿ ನಿಂತು ಇಂಗಬೇಕು, ಇದನ್ನು ಅರ್ಧ ಎಕರೆಗೆ ಮಾಡಿಬಿಡುವುದಲ್ಲ. ಎಲ್ಲಿ ಮಳೆ ಕಡಿಮೆ ಇದೆ ಅಂಥ ಪ್ರದೇಶಗಳಲ್ಲಿ ಮಾಡಬೇಕು ಎಂಬ ದೃಷ್ಟಿಯಿಂದ ಇದನ್ನು ಮಾಡುತ್ತಿದ್ದೇವೆ. ಗ್ರೇಡೆಡ್ ಕಾಂಟೂರ್ ಬಂಡ್ಸ್ ಮಾಡಬೇಕಾದರೆ ಮಳೆ ಅಭಾವ ಪ್ರದೇಶದಲ್ಲಿ ಮಾಡಬೇಕು. ಇವೊತ್ತು ರೈತರಿಗೆ ಸಾಯಿಲ್ ಕನ್‌ಸರ್‌ವೇಷನ್ ಬಂಡ್ಸ್ ಮಾಡುವುದರಿಂದ ಕೆಲವು ಏರಿಯಾಗಳಲ್ಲಿ ಬಂಡ್ಸ್ ಪ್ಲಾಟುಗಳಲ್ಲಿ ಮತ್ತು ನಾನ್ ಬಂಡ್ಸ್ ಪ್ಲಾಟುಗಳಲ್ಲಿ ಬೆಳೆ ಬಹಳ ವ್ಯತ್ಯಾಸ ಕಂಡು ಬಂದಿದೆ. ಈ ಸಾಯಿಲ್ ಕನ್‌ಸರ್‌ವೇಷನ್ ವರ್ಕ್ಸ್ ಮಾಡುವುದರಿಂದ ಕೆಲವು ಏರಿಯಾದಲ್ಲಿ ಇನ್‌ಗ್ರೇಡೆಡ್ ಡೆವಲಪ್‌ಮೆಂಟ್ ಏರಿಯಾ, ಸ್ಕೇರ್‌ಸಿಟಿ ಇರತಕ್ಕ ಪ್ರದೇಶಗಳಲ್ಲಿ ಮಾಡುವುದರಿಂದ ಖಂಡಿತ ಜಾಸ್ತಿ ಬೆಳೆ ದೊರೆಯುತ್ತದೆ. ಇದರ ಬಗ್ಗೆ ಶ್ರೀಮಾನ್ ರಾಮೇಗೌಡರು ಹೇಳಿದರು. ನಾನು ಇಕ್ರಾಟಿಸ್ ಹೈದರಾಬಾದ್‌ಗೆ ಹೋಗಿ ನೋಡಿದೆ ಈಗ ಲೇಟೆಸ್ಟ್ ಟೆಕ್‌ನಾಲಜಿ ಹೆಚ್ಚಾಗಿ ಮಾಹಿತಿ ಒದಗಿಸುತ್ತಿದ್ದಾರೆ, ಅವರು ಹೇಳುವುದು ಆಗುತ್ತಿಲ್ಲ ಎಂದು ಹೇಳುವುದಿಲ್ಲ, ಅದನ್ನು ಪರಿಶೀಲಿಸಬೇಕಾದ್ದು ಇದೆ, ಹಿಂದೆ ಆಗಿರತಕ್ಕದ್ದು ಔಟ್ ಮೋಡೆಡ್ ಆಗಬಹುದು ಏನು ಮಾಡುವುದಕ್ಕೆ ಆಗುತ್ತದೆ. ಅವರು ಹೇಳಿದ್ದು ಪರಿಶೋಧನೆ ಮಾಡಿ ಟ್ರೈಯಲ್ಸ್ ಮಾಡಿ ಡಿಪಾರ್ಟ್‌ಮೆಂಟಿನವರು ಹೇಳಿದರೆ ಮಾಡೋಣ. ಮಾನ್ಯ ಬಂಗಾರಪ್ಪನವರು ಹೇಳಿದ ವಿಚಾರ ಪ್ರಸ್ತಾಪ

ಮಾಡುತ್ತೇನೆ, ಈಗ ವರಲಕ್ಷ್ಮಿ ಹತ್ತಿ ಬೆಲೆ ಬಿದ್ದು ಹೋಗಿದೆ, ಸೀ ಐಲೆಂಡ್ ಕಾಟನ್ ಬೆಲೆ ಬಿದ್ದು ಹೋಗಿದೆ ಎಂಬುದನ್ನು ಎರಡು ಮೂರು ದಿವಸದಿಂದ ಪತ್ರಿಕೆಗಳಲ್ಲಿ ನೋಡಿರಬಹುದು. ಕಾಟನ್ ಕಾರ್ಪೊರೇಷನ್‌ನವರು ರಾಯಚೂರಿನಲ್ಲಿ ಹತ್ತಿ ಕೊಳ್ಳುವುದಕ್ಕೆ ಹೊರಟಿದ್ದಾರೆ. ಕಾಟನ್ ಕಾರ್ಪೊರೇಷನ್ ಸ್ಟೇರ್ ಮಾರ್ಕೆಟ್ಟಿನಲ್ಲಿ ಬಂದು ಹೊತ್ತುಕೊಳ್ಳತಕ್ಕ ಪಾಲಿಸಿ ಡಿಸಿಷನ್ ತೆಗೆದು ಕೊಂಡಿಲ್ಲ. ಈಗ ಡಿಸಿಷನ್ ತೆಗೆದುಕೊಂಡು ಒಂದು ವಾರದಿಂದ ನಮ್ಮ ಅಧಿಕಾರಿಗಳು ಹೋಗಿದ್ದಾರೆ. ಮಾರ್ಕೆಟ್ಟಿನಲ್ಲಿ ಪರ್ಚೇಸ್ ಮಾಡುತ್ತಾರೆ ಇದರಿಂದ ತನ್ನಷ್ಟಕ್ಕೆ ತಾನೇ ಸೀ ಐಲೆಂಡ್, ಲಾಂಗ್‌ಸ್ಟೇಬಲ್ ಕಾಟನ್ ಬೆಲೆ ತನ್ನಷ್ಟಕ್ಕೆ ತಾನೆ ಏರುತ್ತದೆ, ಅದು ಆಗದೇ ಹೋದರೆ ಸೀ ಐಲೆಂಡ್ ಮಾರ್ಕೆಟಿಂಗ್ ಫೆಡರೇಷನ್ ಕೊಳ್ಳಬಹುದು, ಇದರಿಂದ ರೈತರಿಗೆ ರಕ್ಷಣೆಯಾಗಬೇಕು. ಈಗ ಕಾಟನ್ ಕಾರ್ಪೊರೇಷನ್‌ನವರು ಕೊಳ್ಳದೇ ಹೋದರೆ ಮಾರ್ಕೆಟಿಂಗ್ ಫೆಡರೇಷನ್ ವತಿಯಿಂದ ತೆಗೆದುಕೊಳ್ಳುತ್ತೇವೆ ಎಂದು ಬಂಗಾರಪ್ಪನವರು ಮತ್ತು ಅಲ್ಲಿ ಬೆಳೆದಿರತಕ್ಕ ರೈತರಿಗೆ ಭರವಸೆ ಕೊಡುತ್ತೇನೆ. ವರಲಕ್ಷ್ಮಿ ಹತ್ತಿ ಬೀಜದ ಬಗ್ಗೆ ಹೇಳುತ್ತೇನೆ. ಕಳೆದವಾರ ಗಮನ ಸೆಳೆಯುವ ವಿಚಾರ ಪ್ರಸ್ತಾಪಕ್ಕೆ ಬಂದ ಕಾಲದಲ್ಲಿ ನಾನು ಆ ಬಗ್ಗೆ ಸರ್ಕಾರ ತೀವ್ರ ಪರಿಶೀಲಿಸುತ್ತಿದೆ ಎಂದು ಹೇಳಿದ್ದೆ. ಈಗ ಹೊರ ರಾಜ್ಯಗಳಿಗೆ ನಮ್ಮ ವ್ಯವಸಾಯದ ಇಲಾಖೆಯಿಂದ ಇಬ್ಬರು ತಜ್ಞರನ್ನು ಅಲ್ಲಿ ಇರತಕ್ಕ ಬೇಡಿಕೆ ಏನು, ಅಲ್ಲಿ ಎಷ್ಟು ಉತ್ಪಾದನೆ ಮಾಡಿದ್ದಾರೆ ಎಂದು ತಿಳಿಯಲು ಕಳುಹಿಸಿದ್ದೇನೆ. ವರಲಕ್ಷ್ಮಿ, ಮಹಾರಾಷ್ಟ್ರ ಮತ್ತು ಗುಜರಾತ್ ಬೀಜೋತ್ಪಾದನೆ ಮಾಡಿದ್ದಾರೆ ಈಗ ಒಬ್ಬ ಅಧಿಕಾರಿಯನ್ನು ಮಹಾರಾಷ್ಟ್ರ, ಗುಜರಾತ್‌ಗೆ ಕಳುಹಿಸಿದ್ದೇನೆ. ಮತ್ತೊಬ್ಬ ಅಧಿಕಾರಿಯನ್ನು ತಮಿಳುನಾಡು ಆಂಧ್ರ ಪ್ರದೇಶಗಳಿಗೆ ಕಳುಹಿಸಿಕೊಟ್ಟಿದ್ದೇನೆ. ಈಗ ವರದಿ ತಂದಿದ್ದಾರೆ ಮಹಾರಾಷ್ಟ್ರ ಮತ್ತು ಗುಜರಾತ್ ಬೀಜೋತ್ಪಾದನೆ ಮಾಡಿದ್ದು ವರಲಕ್ಷ್ಮಿ ಬೀಜ, ಹತ್ತಿ ಬೀಜ ಆ ಎರಡು ರಾಜ್ಯಗಳಿಗೆ ಬೇಡಿಕೆ ಸರಿಹೋಗುತ್ತದೆ, ಆದರೆ ಆಂಧ್ರ ಮತ್ತು ತಮಿಳು ನಾಡಿಗೆ ಬೇಡಿಕೆ ಇದೆ. 1,500 ಕ್ವಿಂಟಾಲ್ ಅಷ್ಟು ಬೇಡಿಕೆ ಇದೆ ಎಂದು ವರದಿ ಬರುತ್ತಿದೆ. ಈ ವರದಿಯನ್ನು ಪರಿಶೀಲಿಸಿ ನಾವು ಇವತ್ತಿನ ದಿವಸ ಬೀಜೋತ್ಪಾದನೆ ಮಾಡುವುದನ್ನು ಎಲ್ಲವೂ ಪ್ರೊಕ್ಯೂರ್ ಮಾಡಬೇಕಾದರೆ ಸರ್ಕಾರವೇ ಮಾಡುವುದಕ್ಕಾಗುವುದಿಲ್ಲ. ಕರ್ನಾಟಕ ಸೀಡ್ ಕಾರ್ಪೊರೇಷನ್, ಸೀಡ್ ಮಾರ್ಕೆಟಿಂಗ್ ಫೆಡರೇಷನ್ ಮಾನೊಪಲಿ ಪ್ರೊಕ್ಯೂರ್ ಮಾಡಬೇಕು ಎಂದರೆ ಒಂದು ದರವನ್ನು ನಿಗದಿ ಮಾಡಿ ಬೀಜವನ್ನು ಕೊಳ್ಳಬೇಕು. ಮತ್ತೆ ಬೀಜ ಕೊಳ್ಳುವುದರಲ್ಲಿ ಸ್ವಲ್ಪ ಕೊಳ್ಳಬೇಕೇ, ಎಲ್ಲವನ್ನೂ ಕೊಳ್ಳಬೇಕೇ ಎನ್ನುವ ಪ್ರಶ್ನೆ ಬರುತ್ತದೆ. ಶ್ರೀಮಾನ್ ದೇವೇಗೌಡರು ಹೇಳಿದ ಹಾಗೆ ಆಡಲ್ಟರೇಷನ್ ಮಾಡುವುದು ಎಂದರೆ ಲಕ್ಷ್ಮಿ ಬೀಜವನ್ನು ಬೆರೆಸುವುದು, ಮಿಶ್ರ ಮಾಡಿದರೆ ಯಾರಿಗೂ ಗೊತ್ತಾಗುವುದಿಲ್ಲ. ಆದರೆ ಹಳ್ಳಿಗೆ ತೆಗೆದುಕೊಂಡು ಹೋಗಿ ಬೆಳೆದ ಮೇಲೆ ಹತ್ತಿ ಕಾಯಿಯನ್ನು ಬಿಟ್ಟ ಕಾಲದಲ್ಲಿ ಅದು ವರಲಕ್ಷ್ಮಿಯೋ ಅಥವಾ ಲಕ್ಷ್ಮಿಯೋ ಎಂದು ಗೊತ್ತಾಗುತ್ತದೆ. ಅದೇ ರೀತಿಯಲ್ಲಿ ಕಳೆದ ವರ್ಷ ಟ್ರೂತ್‌ಫುಲ್ ಲೇಬಲಿಂಗ್ ಸರ್ಟಿಫೈ ಹಾಕಿ ಮಾರಾಟ ಮಾಡಿದ್ದಾರೆ, ಅದನ್ನು ರೈತರು ಆಂಧ್ರ ಪ್ರದೇಶದ ನಾಗಾರ್ಜುನ ಸಾಗರದಲ್ಲಿ ಬೆಳೆದ ಮೇಲೆ ಬರೀ ಲಕ್ಷ್ಮಿ ಬೆಳೆ ಆಗಿದೆ, ವರಲಕ್ಷ್ಮಿ ಇಲ್ಲ. ಈ ರೀತಿ ಆಗಕೂಡದು ಎಂದು ಸರ್ಕಾರದವರು ಈ ಎಲ್ಲ ವಿಚಾರಗಳನ್ನು ಯೋಚನೆ ಮಾಡಿ ಒಂದು ತೀರ್ಮಾನವನ್ನು ತೆಗೆದುಕೊಂಡಿದ್ದೇವೆ. ಎಲ್ಲವನ್ನೂ ಪ್ರೊಕ್ಯೂರ್ ಮಾಡಬೇಕಾದರೆ 12 ಕೋಟಿ ರೂಪಾಯಿ ಬೇಕಾಗುತ್ತದೆ. 4447 ಪ್ಲಾಟ್‌ನಲ್ಲಿ 4 ½ ಸಾವಿರ ಕ್ವಿಂಟಾಲ್ ಹತ್ತಿ ಬೀಜ ಬೆಳೆಯುತ್ತಾರೆ. ಅದಕ್ಕೆ 150 ರೂಪಾಯಿ ಬೆಲೆ ನಿಗದಿ ಮಾಡಿದರೆ 12–14 ಕೋಟಿ ರೂಪಾಯಿ ಹಣ ಬೇಕಾಗುತ್ತದೆ. ಆದುದರಿಂದ ಇವೆಲ್ಲವನ್ನೂ ಸಮಗ್ರವಾಗಿ ಯೋಚನೆ ಮಾಡಿ ಒಂದು ತೀರ್ಮಾನ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಕೆ.ಎಚ್. ಹನುಮೇಗೌಡ.—ಬೀಜೋತ್ಪಾದನೆಗೆ ಎಷ್ಟು ಡಿಮ್ಯಾಂಡ್ ಇದೆಯೋ ಅಷ್ಟನ್ನು ಕೊಳ್ಳಬೇಕು.

ಶ್ರೀ ಎನ್. ಚಿಕ್ಕೇಗೌಡ.—ಕಳೆದ ವರ್ಷ ವರಲಕ್ಷ್ಮಿ ಹತ್ತಿ ಬೀಜ 900 ರಿಂದ 1000 ರೂಪಾಯಿವರೆಗೂ ಹೋಯಿತು. ಬೀಜ ಕಡಿಮೆ ಉತ್ಪಾದನೆಯಾಗುವುದರಿಂದ ಹಾಗೂ ಕೇವಲ 4000 ಪ್ಲಾಟ್‌ನಲ್ಲಿ ಬೆಳೆದುದರಿಂದ 600 ರೂಪಾಯಿ ಕನಿಷ್ಟ ಬೆಲೆ ನಿಗದಿ ಮಾಡಿದ್ದರೂ ಕೂಡ 1000 ರೂಪಾಯಿಯವರೆಗೆ ಮಾರಿದ್ದಾರೆ. ಮಹಾರಾಷ್ಟ್ರ ಮತ್ತು ಗುಜರಾತಿನಲ್ಲಿ 2500 ಕ್ವಿಂಟಾಲ್ ಬೀಜೋತ್ಪಾದನೆಯಾಗಿದೆ. ಇನ್ನು ಮುಂದೆ ಇದರ ಬಗ್ಗೆ ಡೆಫನೆಟ್ಟಾಗಿ ನಿರ್ಬಂಧ ಹಾಕುತ್ತೇವೆ. ಬೇಡಿಕೆ ಬಂದ ಕಾಲದಲ್ಲಿ ಕೊಡದೇ ಹೋದರೆ ಸಾಮಾನ್ಯ ರೈತರಿಗೆ ತೊಂದರೆಯಾಗುತ್ತದೆ. ಸಾವಿರಾರು ರೂಪಾಯಿ ಹಾಕಿರುವವರಿಗೆ ರಕ್ಷಣೆ ಕೊಡದೇ ಹೋದರೆ ಅನ್ಯಾಯವಾಗುತ್ತದೆ. ಮುಂದಿನ ವರ್ಷದಲ್ಲಿ ಇದರ ಬಗ್ಗೆ ಎಚ್ಚರಿಕೆಯಿಂದ ಇರುತ್ತೇವೆ. ಇನ್ನೊಂದು ವಾರದಲ್ಲಿ ಅದರ ಬಗ್ಗೆ

ತೀರ್ಮಾನ ತೆಗೆದುಕೊಳ್ಳುತ್ತೇವೆ. ಇವತ್ತು ಎಲ್ಲವನ್ನೂ ಪ್ರೊಕ್ಯೂರ್ ಮಾಡಬೇಕಾದರೆ 12 ಕೋಟಿ ರೂಪಾಯಿ ಬೇಕಾಗುತ್ತದೆ. ರಿಸರ್ವ್ ಬ್ಯಾಂಕ್, ಕಮರ್ಷಿಯಲ್ ಬ್ಯಾಂಕ್‌ಗಳ ಜೊತೆಯಲ್ಲಿ ಮಾತನಾಡಿ, ಅನುಮತಿ ದೊರಕಿಸಿಕೊಳ್ಳಲಿಕ್ಕೆ ಡೆವಲಪ್‌ಮೆಂಟ್ ಕಮಿಷನರ್ ಹೋಗಿದ್ದಾರೆ ಅವರು ಬಂದ ಮೇಲೆ ತೀರ್ಮಾನ ಮಾಡೋಣ.

ಇನ್ನು ಕೃಷಿ ವಿಶ್ವವಿದ್ಯಾನಿಲಯದ ಬಗ್ಗೆ ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಮಾನ್ಯ ಸದಸ್ಯರು ಬೋರ್ಡ್ ಆಫ್ ರಿಜೆಂಟ್ಸ್ ಆಗಿದ್ದಾರೆ. ಸರ್ಕಾರದಿಂದ ನಾಮಕರಣವಾದ ಸದಸ್ಯರು ಇದ್ದಾರೆ. ಮುಖ್ಯವಾಗಿ ಕೃಷಿ ವಿಶ್ವವಿದ್ಯಾನಿಲಯಕ್ಕೆ ಸಾಕಷ್ಟು ಹಣಕೊಡುತ್ತಾ ಇಲ್ಲ ಬ್ಲಾಕ ಗ್ರ್ಯಾಂಟ್, ಡೆವಲಪ್‌ಮೆಂಟ್ ಗ್ರ್ಯಾಂಟ್ ಕೊಡುತ್ತಾ ಇಲ್ಲ ಎಂದು ಹೇಳಿದರು. ಕೃಷಿ ವಿಶ್ವವಿದ್ಯಾನಿಲಯದ ಪ್ರಗತಿ ಮತ್ತು ಅಲ್ಲಿ ಆಗತಕ್ಕ ಸಂಶೋಧನೆ, ಅಲ್ಲಿ ನಡೆಯತಕ್ಕ ಕೃಷಿಕರಿಗೆ, ಕೃಷಿಕರ ಮಕ್ಕಳಿಗೆ ವಿದ್ಯಾಭ್ಯಾಸ......

ಶ್ರೀ ಸಿ. ಬೈರೇಗೌಡ.—ಕೃಷಿಕರ ಮಕ್ಕಳು ಎನ್ನುವುದನ್ನು ಬಿಟ್ಟುಬಿಡಿ, ಉಳಿದಿದ್ದನ್ನು ಹೇಳಿ.

ಶ್ರೀ ಎನ್. ಚಿಕ್ಕೇಗೌಡ.—ನೀವು ಅರ್ಜಿ ಹಾಕಿದರೆ ಸೀಟ್ ಕೊಡಲಿಲ್ಲವೋ ಏನೋ, ಕಳೆದ ವರ್ಷ ನಾವು ಒಂದು ತೀರ್ಮಾನ ತೆಗೆದುಕೊಂಡೆವು. ಏನೆಂದರೆ, ಕೃಷಿಕರ ಮಕ್ಕಳಿಗೆ ಅಲ್ಲಿ ಪ್ರವೇಶ ಕೊಡಬೇಕಾದರೆ ಇಂಟರ್‌ವ್ಯೂ ಕಾಲದಲ್ಲಿ 5 ಮಾರ್ಕ್ಸ್‌ನ್ನು ಕೊಡತಕ್ಕ ವ್ಯವಸ್ಥೆ ಮಾಡಿದೆವು. ಇದಕ್ಕಿಂತ ಹೆಚ್ಚಿಗೆ ಮಾಡುವುದಕ್ಕೆ ಹೋದರೆ ರಾಜ್ಯಾಂಗಬದ್ಧವಾದ ಹಕ್ಕುಗಳನ್ನು ಪ್ರಶ್ನೆ ಮಾಡುವುದಕ್ಕೆ ಬರುತ್ತದೆ. ಕೋರ್ಟಿನ ಮುಂದೆ ಹೋಗಿ ನಿಲ್ಲುವಂತದ್ದಾಗುವುದಿಲ್ಲ. ಆದ್ದರಿಂದ ಹಂತ ಹಂತವಾಗಿ ಮಾಡುತ್ತಿದ್ದೇವೆ. ಅದಕ್ಕೋಸ್ಕರ 5 ಅಂಕಗಳನ್ನು ಕೊಡುವುದನ್ನು ಜಾರಿಗೆ ಕೊಟ್ಟಿದ್ದೇವೆ. ಅಷ್ಟೇ ಅಲ್ಲದೆ ಕೃಷಿ ವಿಶ್ವವಿದ್ಯಾನಿಲಯಕ್ಕೆ, ರಾಜ್ಯಾಂಗಕ್ಕೆ ವಿರೋಧವಾದುದನ್ನು ಬಿಟ್ಟು ಇನ್ನೂ ಹೆಚ್ಚು ಕನ್ಸೆಷನ್ ಮಕ್ಕಳಿಗೆ ಕೊಡುವ ಬಗ್ಗೆ ಯೋಚನೆ ಮಾಡಿ ಎಂದು ಕೂಡ ಹೇಳಿದ್ದೇವೆ. ಈ ವರ್ಷದಲ್ಲಿ ಕೃಷಿ ವಿಶ್ವವಿದ್ಯಾನಿಲಯದಲ್ಲಿ ಗ್ರಾಮಾಂತರ ಪ್ರದೇಶ ರೈತರ ಮಕ್ಕಳಿಗೆ ಪ್ರವೇಶಾವಕಾಶ ದೊರಕಿದೆ ಮತ್ತು ಕೃಷಿ ವಿಶ್ವವಿದ್ಯಾನಿಲಯದಲ್ಲಿ ಪರಿಶೋಧನೆ ಬಗ್ಗೆ ಹೆಚ್ಚು ಪ್ರಗತಿಯಾಗಿದೆ ಅದರಲ್ಲೂ ವರಲಕ್ಷ್ಮಿ, ಜೋಳ, ಭತ್ತ ತಳಿಗಳ ಬಗ್ಗೆ ಸಂಶೋಧನಾ ಕೆಲಸ ಆಗುತ್ತಾ ಇದೆ. ನಮ್ಮ ಕೃಷಿ ವಿಶ್ವವಿದ್ಯಾನಿಲಯವನ್ನು ಬೇರೆ ರಾಜ್ಯಗಳಿಗೆ ಹೋಲಿಸಿದರೆ ನಮ್ಮದು ಚೆನ್ನಾಗಿ ಕೆಲಸ ಮಾಡುತ್ತಿದೆ. ಇದಕ್ಕೆ ಬೇಕಾದಂಥ ಹಣವನ್ನು ಒದಗಿಸಬೇಕು ಎಂದು ಮಾನ್ಯ ಸದಸ್ಯರು ಕಳಕಳಿಯಿಂದ ಹೇಳಿದರು.

ಶ್ರೀ ಕೋಣಂದೂರು ಲಿಂಗಪ್ಪ.—ಕೃಷಿ ವಿಶ್ವವಿದ್ಯಾನಿಲಯ ಚೆನ್ನಾಗಿ ಕೆಲಸ ಮಾಡುತ್ತಿದೆ ಎನ್ನುವುದರ ಬಗ್ಗೆ ನಮಗೆ ಭಿನ್ನಾಭಿಪ್ರಾಯ ಇಲ್ಲ. ನಮ್ಮ ರಾಜ್ಯದ ರೈತರ ಮಕ್ಕಳಿಗೆ ಶಿಕ್ಷಣ ಮಾಧ್ಯಮ ಯಾವ ಭಾಷೆಯಲ್ಲಿದೆ. ಇಂಗ್ಲೀಷಿನಲ್ಲಿ ಬೇಸಾಯ ಮಾಡಿಸುತ್ತಿದ್ದೀರೋ ಅಥವಾ ಕನ್ನಡದಲ್ಲಿ ಬೇಸಾಯ ಮಾಡಿದುತ್ತಿದ್ದೀರೋ ?

ಶ್ರೀ ಎನ್. ಚಿಕ್ಕೇಗೌಡ.—ಶ್ರೀಮಾನ್ ಕೋಣಂದೂರು ಲಿಂಗಪ್ಪನವರು, ರಾಮೇಗೌಡರು ಈ ವಿಚಾರವನ್ನು ನಿನ್ನೆ ಪ್ರಸ್ತಾಪ ಮಾಡಿದರು. ಇದರಲ್ಲಿ ಕೆಲವು ಟೆಕ್ನಿಕಲ್ ಟರ್ಮ್ಸ್ ಇವೆ. ಕನ್ನಡದಲ್ಲಿ ತರಬೇತಿ ಕೊಡಬೇಕು, ಬೋಧನಾಕ್ರಮವನ್ನು ಕನ್ನಡದಲ್ಲಿ ಮಾಡಬೇಕ ಎನ್ನುವುದರಲ್ಲಿ ಎರಡು ಮಾತು ಇಲ್ಲ. ಹಂತಹಂತವಾಗಿ ಕೃಷಿ ವಿಶ್ವವಿದ್ಯಾನಿಲಯದಲ್ಲಿ ಕನ್ನಡದಲ್ಲಿ ಭೋಧನಾಕ್ರಮವನ್ನು ಅನುಸರಿಸಬೇಕು ಎನ್ನುವುದರ ಬಗ್ಗೆ ನನಗೂ ಒಪ್ಪಿಗೆ ಇದೆ. ಇದನ್ನು ಹಂತಹಂತವಾಗಿ ಮಾಡೋಣ ಕನ್ನಡದಲ್ಲಿ ತರಬೇತಿ ಕೊಡಬೇಕಾದರೆ ಮತ್ತು ಬೋಧನಾಕ್ರಮವನ್ನು ಅನುಸರಿಸಬೇಕಾದು ಪುಸ್ತಕಗಳನ್ನು ಅಚ್ಚು ಹಾಕಿಸುವುದು, ಇಂಗ್ಲಿಷ್ ಪದಗಳನ್ನು ಕನ್ನಡಕ್ಕೆ ಅನುವಾದ ಮಾಡುವುದರೆ ಇವೆಲ್ಲವನ್ನೂ ಮಾಡಬೇಕಾಗಿದೆ. ಕೃಷಿ ವಿಶ್ವವಿದ್ಯಾನಿಲಯದಲ್ಲಿ ಕನ್ನಡದಲ್ಲಿ ಪಾಠ ಹೇಳುವುದು ಸರಿಯಲ್ಲ ಎನ್ನುವುದನ್ನು ನಾನೂ ಒಪ್ಪುತ್ತೇನೆ. ಇವೆಲ್ಲವನ್ನೂ ಫೇಸ್ಡ್ ಪ್ರೋಗ್ರಾಮಿನಲ್ಲಿ ಮಾಡಬೇಕು, ಹಂತಹಂತವಾಗಿ ಕನ್ನಡವನ್ನು ಮಾಧ್ಯಮವನ್ನಾಗಿ ಮಾಡಬೇಕು ಎನ್ನುವುದನ್ನು ನಾನೂ ಒಪ್ಪುತ್ತೇನೆ. ಇದಕ್ಕೆ ಬೇಕಾದಂಥ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತೇವೆ. ಮೊನ್ನೆ ಪ್ರದರ್ಶನದಲ್ಲಿ ಕೆಲವು ಪುಸ್ತಕಗಳನ್ನು ಇಟ್ಟಿದ್ದರು. ಕೆಲವು ಇಂಗ್ಲಿಷ್ ಪದಗಳಿಗೆ ಕನ್ನಡದಲ್ಲಿ ಅನುವಾದ ಮಾಡಿದ್ದಾರೆ.

ಇನ್ನು ಕೃಷಿವಿದ್ಯಾನಿಲಯಕ್ಕೆ ಕೊಡಬೇಕಾದ ಗ್ರಾಂಟ್ ಬಗ್ಗೆ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. 1972 ರಿಂದ 1974—75 ರವರೆಗೆ ಡೆವಲಪ್‌ಮೆಂಟ್ ಗ್ರಾಂಟ್ ಬ್ಲಾಕ್ ಗ್ರಾಂಟನ್ನು ಕೊಟ್ಟಿದ್ದೇನೆ. 1971—72 ರಲ್ಲಿ 1 ಲಕ್ಷ ಕೊಟ್ಟರೆ 1972—73 ರಲ್ಲಿ 140 ಲಕ್ಷಕ್ಕೆ ಏರಿಸಿದೆ. 1974—75 ರಲ್ಲಿ 170 ಲಕ್ಷ ಕೊಟ್ಟಿದ್ದೇವೆ. ಇದನ್ನು 220 ಲಕ್ಷಕ್ಕೆ ಏರಿಸಬೇಕು ಎಂದು ನಮ್ಮ ಕೃಷಿ ವಿಶ್ವವಿದ್ಯಾನಿಲಯದ ಅಧಿಕಾರಿಗಳು ಮತ್ತು ಸಂಬಂಧಪಟ್ಟವರು ಸರ್ಕಾರಕ್ಕೆ ಮನವಿಯನ್ನು ಕೊಟ್ಟಿದ್ದಾರೆ.

ಇದನ್ನು 220 ಲಕ್ಷಕ್ಕೆ ಏರಿಸಬೇಕು ಎಂದು ನಮ್ಮ ಆಶಯವಾಗಿದ್ದಲೆ, ಶಾಸನಸಭೆಯ ಸದಸ್ಯರು, ಬೋರ್ಡ್ ಆಫ್ ರಿಜೆಂಟ್ಸ್ ಆಗಿರತಕ್ಕವರು ಒತ್ತಾಯ ಮಾಡಿದ್ದಾರೆ, ಅಧಿಕಾರಿಗಳ ಮಟ್ಟದಲ್ಲಿ ಅಂಕಿಸಂಖ್ಯೆಗಳನ್ನು ಕೊಟ್ಟಿದ್ದಾರೆ, 1973 ರ ಬೇಸಿಸ್ ಮೇಲೆ ಕೊಟ್ಟಿರತಕ್ಕದ್ದನ್ನು ಸೇರಿಸಿಲ್ಲ. 1973—74 ಅಂಕಿ ಸಂಖ್ಯೆಗಳ ಮೇಲೆ ಡಿ.ಎ. ಹೆಚ್ಚಾಗಿರತಕ್ಕದ್ದು ನ್ಯಾಯವಾಗಿ ಇರುವುದರಿಂದ, ಇದನ್ನು ಗಣನೆಗೆ ತೆಗೆದುಕೊಳ್ಳಬೇಕೆಂದು ಹೇಳಿದ್ದಾರೆ. ಇದರ ಬಗ್ಗೆ ಅಧಿಕಾರಿಗಳು ಹಣಕಾಸಿನ ಇಲಾಖೆ ನೋಡಿಸಿದ ಮೇಲೆ ಅದು ವಿಧಿವತ್ತಾಗಿದೆ ಎಂದು ಕಂಡುಬಂದಿತು.

ಶ್ರೀ ಕೆ. ಎಚ್. ಹನುಮೇಗೌಡ.—1972-73 ರಿಂದ ಈಚೆಗೆ 2—3 ಸಾರಿ ಡಿ.ಎ. ಜಾಸ್ತಿಯಾಗಿದೆ. ರೀಸರ್ಚ್ ವರ್ಕ್ ಇರುವುದು ಬೋರ್ಡ್ ಹಾಕಿಕೊಂಡು ಹಾಗೆಯೇ ಉಳಿದುಬಿಟ್ಟರೆ ಪ್ರಯೋಜನವಾಗುವುದಿಲ್ಲ. ಅದರ ಸ್ಥಿತಿಗತಿಗಳನ್ನು ತೆಗೆದುಕೊಂಡು ಅಲಾಟ್ ಮಾಡಿ.

ಶ್ರೀ ಎನ್. ಚಿಕ್ಕೇಗೌಡ.—ಅವರು ಕೊಟ್ಟಿರತಕ್ಕ ಅಂಕಿಸಂಖ್ಯೆಗಳನ್ನು ಹಣಕಾಸಿನ ಇಲಾಖೆಯವರು ಒಪ್ಪಲಿಲ್ಲ. 1972—73 ರ ಬೇಸಿಸ್ ತೆಗೆದುಕೊಂಡರೂ ಸಹ ಅಲ್ಲಿ ಸ್ವಲ್ಪ ಅವರಿಗೆ ಟ್ಯಾಲಿ ಇಗುತ್ತಾ ಇಲ್ಲ. ವರ್ಷವೆಲ್ಲ ಆಗಿರತಕ್ಕ ಎಕ್ಸ್‌ಪೆಂಡಿಚರ್ ಫಿಗರ್ಸ್ ಕೊಟ್ಟಿರುತ್ತಾರೆ. ಈ ವರ್ಷದಲ್ಲಿಯೇ ವಿಚಾರವನ್ನು ತೀರ್ಮಾನ ಮಾಡಬೇಕು 31ನೇ ತಾರೀಖಿನೊಳಗೆ ನಾವು ಸರ್ಕಾರಕ್ಕೆ ಲೆಕ್ಕ ಕೊಡದೇ ಹೋದರೆ ಅವರು ಪರಿಗಣನೆಗೆ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಇಲಾಖೆ ಆಡಿಟ್ ಮಾಡಿ ಹದಿನಾಲ್ಕು ದಿವಸದಲ್ಲಿ ಆಡಿಟ್ ರಿಪೋರ್ಟ್ ಕಳುಹಿಸಿ ಎಂದು ಆಡಿಟ್ ಸೆಲ್‌ನವರನ್ನು ಕಳುಹಿಸಿಕೊಟ್ಟಿದ್ದೇವೆ. ಇದರ ಬಗ್ಗೆ ಸಂಬಂಧಪಟ್ಟ ಸೆಕ್ರೆಟರಿಯವರಲ್ಲಿ ಮಾತನಾಡಿದ್ದೇವೆ. ಒಟ್ಟಿನಲ್ಲಿ ಸರಕಾರ ಸಹಾನುಭೂತಿಯಿಂದ ಪರಿಶೀಲಿಸುತ್ತದೆ ಎಂದು ಹೇಳಿದರೆ ಮಾನ್ಯಸದಸ್ಯರು ಒಪ್ಪಿಕೊಳ್ಳುತ್ತಾರೆಂದು ಭಾವಿಸುತ್ತೇನೆ. ಯೂನಿವರ್ಸಿಟಿ ರೀಸರ್ಚ್ ವರ್ಕ್ಸ್ ಕಡ್ಡಾಯವಾಗಿ ಮಾಡಬೇಕು. ಅದಕ್ಕೆ ಹಣ ಕೊಡಬೇಕು. ಸರ್ಕಾರ ಈ ವಿಚಾರದಲ್ಲಿ ಕೊಡಬೇಕಾದರೆ ಎಲ್ಲ ಲೆಕ್ಕ, ಮಾಹಿತಿ ನೋಡಿ ಕೊಡಬೇಕಾಗುತ್ತದೆ.

ಡೆವಲಪ್‌ಮೆಂಟ್ ಗ್ರಾಂಟ್ ಬಗ್ಗೆ 60 ಲಕ್ಷ ರೂಪಾಯಿಗಳಷ್ಟು ಕೊಟ್ಟಿದ್ದೇವೆ. ಒಂದು ಕಡೆ ಕೇಳಿದ್ದಾರೆ ಕಡಿಮೆ ಮಾಡಿದ್ದೀರೆಂದು. ಆದ್ದರಿಂದ ಫೈನಾನ್ಸ್ ಪೊಜಿಶನ್ ನೋಡಿಕೊಂಡು ಕೊಡಬೇಕಾಗುತ್ತದೆ.

ಶ್ರೀ ಜಿ. ರಾಮೇಗೌಡ.—ಸರ್ಕಾರ ಒಂದು ವರ್ಷಕ್ಕೆ ಏಳು ಸಲ ಡಿ.ಎ.ಯನ್ನು ಎನ್‌ಹಾನ್ಸ್ ಮಾಡಿದ್ದಾರೆ. ಅದಕ್ಕಾಗಿ 54 ಲಕ್ಷ ಹೆಚ್ಚಿಗೆ ಖರ್ಚು ಮಾಡಿದ್ದಾರೆ, ಹತ್ತು ಲಕ್ಷ ರೂಪಾಯಿಗಳನ್ನು ಕೊಟ್ಟು ಸುಧಾರಿಸಿ ಎಂದು ಹೇಳಿದರೆ ಅದು ಹೇಗೆ ಸಾಧ್ಯ. ಅವರಿಗೇನು ತಣ್ಣೀರು ಕುಡಿಸುವುದೇ ?

ಶ್ರೀ ಎನ್. ಚಿಕ್ಕೇಗೌಡ.—ಬ್ಲಾಕ್ ಗ್ರಾಂಟ್ ಹೆಚ್ಚು ಕೊಡಿಸುವ ಬಗ್ಗೆ ಎಕ್ಸಾಮಿನ್ ಮಾಡುತ್ತೇನೆ. ಆದಷ್ಟು ಜಾಗ್ರತೆ ಟೆಕ್ನಿಕಲ್ ಆಡಿಟ್ ಸೆಲ್ ವರದಿ ತರಿಸಿ ಅವರು ಹೇಳತಕ್ಕ ಫಿಗರ್ಸ್ ಟ್ಯಾಲಿ ಆಗದೆ ಹೋದರೆ ಕ್ವಿಕ್ ಆಡಿಟ್ ಬ್ಯೂರೋದವರಿಂದ ಆಡಿಟ್ ವರದಿ ಬಂದ ಮೇಲೆ ನ್ಯಾಯವಾಗಿ ಕೊಡುವುದಿದ್ದರೆ, ಸಹಾನುಭೂತಿಯಿಂದ ಪರಿಶೀಲಿಸುತ್ತೇವೆ. 31ನೇ ತಾರೀಖಿನೊಳಗೆ ತೀರ್ಮಾನ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ಇಷ್ಟು ಮಾತ್ರ ಹೇಳುತ್ತೇನೆ. ಶ್ರೀಮಾನ್ ವೇಪೇಗೌಡರು ಸ್ಮಾಲ್ ಫಾರ್ಮರ್ಸ್, ಮಾರ್ಜಿನಲ್ ಫಾರ್ಮರ್ಸ್ ನಮ್ಮ ರಾಜ್ಯದಲ್ಲಿ ಬಹಳ ಜನ ಇರುತ್ತಾರೆ, ಅವರ ಬಗ್ಗೆ ನಿಗಾ ಕೊಡಬೇಕೆಂದು ಹೇಳಿದರು. ಸ್ಮಾಲ್ ಫಾರ್ಮರ್ಸ್, ಮಾರ್ಜಿನಲ್ ಫಾರ್ಮರ್ಸ್ ಡೆವಲಪ್‌ಮೆಂಟ್ ಏಜನ್ಸಿ ಮೂರು ಜಿಲ್ಲೆಗಳಲ್ಲಿ ಕೆಲಸ ಮಾಡುತ್ತಿವೆ, ಬೆಂಗಳೂರು, ಮೈಸೂರು, ಮತ್ತು ಬೀದರ್ ಜಿಲ್ಲೆಗಳಲ್ಲಿ ಅವು ಇವೆ. 1974—75 ರಲ್ಲಿ ಬಳ್ಳಾರಿ ಮತ್ತು ಹಾಸನ ಜಿಲ್ಲೆಗಳಲ್ಲಿ ಸ್ಮಾಲ್ ಫಾರ್ಮರ್ಸ್ ಡೆವಲಪ್‌ಮೆಂಟ್ ಏಜೆನ್ಸಿ ಪ್ರಾರಂಭವಾಗಿದ್ದು ಶಿವಮೊಗ್ಗ, ಗುಲ್ಬರ್ಗಾ ಡಿಸ್ಟ್ರಿಕ್ಟ್ ನಲ್ಲಿ ಸ್ಮಾಲ್ ಫಾರ್ಮರ್ಸ್ ಮಾರ್ಜಿನಲ್ ಫಾರ್ಮರ್ಸ್,

ಕಾರ್ಯಕ್ರಮವನ್ನು 1975—76 ರಲ್ಲಿ ಪ್ರಾರಂಭಮಾಡಬೇಕೆಂದು ಇದ್ದು, ಇದು ಕೇಂದ್ರ ಸರ್ಕಾರದ ಯೋಜನೆಯಲ್ಲಿ ಬರತಕ್ಕದ್ದರಿಂದ ಸೆಂಟ್ರಲ್ ಸ್ಪಾನ್ಸರ್ಸ್ ಅವರನ್ನು ಒತ್ತಾಯ ಮಾಡುತ್ತಿದ್ದೇವೆ. ಅವರು 1976-77 ರಲ್ಲಿ ಪ್ರಾರಂಭ ಮಾಡಲಿಕ್ಕೆ ಹೇಳುತ್ತಿದ್ದಾರೆ. 1975-76 ರಲ್ಲಿಯೇ ಇದನ್ನು ಕಾರ್ಯಗತ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು, ಇದಕ್ಕೆ ಸಂಬಂಧಪಟ್ಟವರಾದ ಶ್ರೀ ಅಣ್ಣಾಸಾಹೇಬ್ ಸಿಂದೆಯವರನ್ನು ಒತ್ತಾಯ ಮಾಡುತ್ತಿದ್ದೇವೆ. ಇದರ ಬಗ್ಗೆ ಮೂರು ದಿವಸದ ಹಿಂದೆ ಪತ್ರವನ್ನೂ ಸಹ ಬರೆದಿದ್ದೇನೆ. ದೆಹಲಿಗೆ ಹೋದರೆ 1975-76 ರಲ್ಲಿ ಪ್ರಾರಂಭ ಮಾಡುವುದಕ್ಕೆ ಕೇಂದ್ರ ಸರ್ಕಾರದವರನ್ನು ಒತ್ತಾಯ ಮಾಡಿ ಕ್ರಮ ತೆಗೆದುಕೊಳ್ಳುತ್ತೇನೆಂದು ಸದಸ್ಯರು ಏನು ಇದ್ದಾರೆ ಅವರಿಗೆ ತಮ್ಮ ಮುಖಾಂತರ ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ.

ಮುಖ್ಯವಾಗಿ ಸರ್ಕಾರಿ ವೆಲ್ಸ್ ಜಾಸ್ತಿಯಾಗಿದೆ, ಆದರೆ ಜಲ ಕಮ್ಮಿ ಇದೆ ಎನ್ನುವ ದೂರು ಇದೆ. ಭೂ ಅಭಿವೃದ್ಧಿ ಬ್ಯಾಂಕಿನಿಂದ ವೆಲ್ ಸಬ್‌ಸಿಡಿ ಕೊಡುವ ಯೋಜನೆ ಮಾಡುತ್ತೇವೆ. ಜಿಯಾಲಾಜಿಕಲ್ ಡಿಪಾರ್ಟ್‌ಮೆಂಟ್‌ನ ಗ್ರೌಂಡ್ ವಾಟರ್ ವೆಲ್ಸ್ ಎಕ್ಸ್‌ಪರ್ಟ್ಸ್ ಹೇಳುತ್ತಾರೆ ಒಂದು ಬಾವಿಯಿಂದ ಇನ್ನೊಂದು ಬಾವಿಗೆ ಅಂತರ ಇರಬೇಕೆಂದು. ಕೆಲವು ತಾಲೂಕುಗಳಲ್ಲಿ ನೋ‌ಮೋರ್ ವೆಲ್ಸ್ ಎಂದು ಸ್ಪಷ್ಟ ಅಭಿಪ್ರಾಯಪಟ್ಟಿದ್ದಾರೆ. ಇಡಿ ರಾಜ್ಯಕ್ಕೆ ಗ್ರೌಂಡ್ ವಾಟರ್ ಸೆರ್‌ನವರು ತೆಗೆಯುವ ಬಾವಿಯೂ ಇಲ್ಲ ನೀರು ಇಲ್ಲದಿದ್ದರೆ ಏನು ಪ್ರಯೋಜನ. ಆದ್ದರಿಂದ ಇದಕ್ಕೆ ಲೆಜಿಸ್ಲೇಷನ್‌ಗೆ ತರಬೇಕು ಎಂದು ಸರ್ಕಾರ ಯೋಚನೆ ಮಾಡುತ್ತಿದೆ. ಶ್ರೀಮಾನ್ ದೇವೇಗೌಡರು ಹೇಳಿದರು. ಕಾಂಪೋಸ್ಟ್ ಗೊಬ್ಬರದ ತಯಾರಿಕೆಯ ಬಗ್ಗೆ ಬೆಂಗಳೂರಿನಲ್ಲಿ ಮೆಕ್ಯಾನಿಕಲ್ ಕಾಂಪೋಸ್ಟ್ ಮಾಡಬೇಕು ಎಂದು ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್, ಮಾರ್ಕೆಟಿಂಗ್ ಫೆಡರೇಷನ್ ಮತ್ತು ಬೆಂಗಳೂರು ಸಿಟಿ ಕಾರ್ಪೊರೇಷನ್ ಈ ಮೂರು ಜನ ಸೇರಿ ಬೆಂಗಳೂರು ನಗರದಲ್ಲಿ ದೊರೆಯತಕ್ಕ ವೇಸ್ಟ್ ಮೆಟೀರಿಯಲ್ಸ್‌ನೆಲ್ಲ ಕಾಂಪೋಸ್ಟ್ ಮಾಡಬೇಕೆಂದು ತೀರ್ಮಾನ ತೆಗೆದುಕೊಂಡು, ಕಾರ್ಪೊರೇಷನ್‌ನವರು ಅದಕ್ಕೆ ಬೇಕಾದ ಭೂಮಿಯನ್ನು ಸಹ ಕೊಟ್ಟಿದ್ದಾರೆ. ಅದನ್ನು ಪ್ರಾರಂಭ ಮಾಡುತ್ತಾರೆ.

ಶ್ರೀ ಜಿ. ರಾಮೇಗೌಡ.—ನಾಲ್ಕು ವರ್ಷದ ಮುಂಚೆ ಕಾರ್ಪೊರೇಷನ್ 60 ಲಕ್ಷ ರೂಪಾಯಿಗಳನ್ನು ಕೊಟ್ಟಿದೆ, ಸ್ಥಳ ಕೊಟ್ಟಿದೆ, ನಾಲ್ಕು ವರ್ಷದಿಂದ ಏನು ಮಾಡಿದ್ದೀರಿ? ಮೂರು ವರ್ಷದ ಹಿಂದೆ ಇದೆ ಮಹಾಸಭೆಯಲ್ಲಿ ಯಂತ್ರಕ್ಕೆ ಆರ್ಡರ್ಸ್ ಕೊಟ್ಟಿದ್ದೇವೆಂದು, ಬರುತ್ತಾ ಇದೆ ಎಂದು ವಾಗ್ದಾನ ಮಾಡಿದಿರಿ. ಇದುವರೆಗೂ ಬಂದಿಲ್ಲ, ಸ್ಥಳ ಏನಾಯಿತು, ಯೋಜನೆ ಏನಾಯಿತು ಯಂತ್ರ ಎಲ್ಲಿಂದ ತರಿಸಬೇಕು ;

ಶ್ರೀ ಎಸ್. ಚಿಕ್ಕೇಗೌಡ.—ಯಂತ್ರ ಇನ್ನೂ ತರಿಸಿಲ್ಲ. ಕಾರ್ಪೊರೇಷನ್ ಎಸ್ಟಿಮೇಟ್ ಮಾನೆ ಸರ್ಕಾರ ಒಪ್ಪಿಗೆ ಇಲ್ಲದ್ದರಿಂದ ನಿಂತಿದೆ, ಇದಕ್ಕೆ ಕೇಂದ್ರ ಸರ್ಕಾರದವರು 33 143 ಪರ್ಸೆಂಟ್ ಸಬ್‌ಸಿಡಿ ರೂಪದಲ್ಲಿ ಕೊಡುತ್ತದೆ. ಕಾರ್ಪೊರೇಷನ್, ಆಗ್ರೋ ಇಂಡಸ್ಟ್ರೀಸ್, ಮಾರ್ಕೆಟಿಂಗ್ ಫೆಡರೇಷನ್, ಇಂಡಿಯಾ ಗವರ್ನಮೆಂಟ್, ನಾಲ್ಕು ಸಂಸ್ಥೆಗಳು ಸೇರಿ ಕಾಂಪೋಸ್ಟ್ ಪ್ಲಾಂಟ್ ಈ ಯೋಜನೆಯನ್ನು ಕಾರ್ಯಗತ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀಮಾನ್ ಬಂಗಾರಪ್ಪನವರು ಮತ್ತಿತರ ಕೆಲವು ಸದಸ್ಯರು ಟ್ರಾಕ್ಟರ್ಸ್ ಬಗ್ಗೆ ಹೇಳುತ್ತಾ ಟ್ರಾಕ್ಟರ್ಸ್ ಕೆಟ್ಟು ನಿಂತು ಹೋದರೆ ಅದಕ್ಕೆ ಸರ್ವೀಸ್ ಸೆಂಟರ್ಸ್ ಇಲ್ಲವೆಂದು ಹೇಳಿದರು ಮತ್ತು ವಿವರವನ್ನು ಹೇಳುವುದಾದರೆ ನಮ್ಮಲ್ಲಿ ಬುಲ್‌ಡೋಜರ್ಸ್ 153, ಟ್ರಾಕ್ಟರ್ಸ್ 110, ಪವರ್ ಟಿಲ್ಲರ್ಸ್ 38, ಫಾಸ್ಟ್ ರಿಗ್ಸ್ 12, ಕಾಲಿಕ್ಸ್ ರಿಗ್ಸ್ 52, ಫಾಸ್ಟ್ ಹಾಲ್‌ಕೊ ಮೈನರ. ರಿಗ್ಸ್ 6, ರಾಕ್ ಡ್ರಿಲಿಂಗ್ ಮತ್ತು ಬ್ಲಾಸ್ಟಿಂಗ್ ಯೂನಿಟ್ಸ್—51, ಮತ್ತು ಬೇರೆ ಸೆಲ್ ಮಾಸ್ಟರು 23 ಇದ್ದು ಇವು ರೈತರಿಗೆ ವ್ಯವಸಾಯಕ್ಕೆ ಬೇಕಾದುದು. ಸ್ಪೇರ್‌ಪಾರ್ಟ್ಸ್ ಇಲ್ಲದೆ ಕೆಲವಾರು ಕೆಟ್ಟು ಹೋಗಿವೆ. ಇನ್ನು ಸೊರಬ ತಾಲ್ಲೂಕ್ ಪ್ರೆಸಿಡೆಂಟ್‌ರವರು ಟ್ರಾಕ್ಟರನ್ನು ಇಟ್ಟುಕೊಂಡಿರರ್ ಬಗ್ಗೆ ಹೇಳಿದರು. ಅವರಿಗೆ ಹೈರ್ ಪರ್ಚೇಸ್‌ಗೆ ಕೊಟ್ಟಿಲ್ಲ. ಇದರ ಮಾಹಿತಿ ತರಿಸುತ್ತೇವೆ. ಆಗ್ರೋ ಇಂಡಸ್ಟ್ರೀಸ್‌ನಲ್ಲಿ ಇರತಕ್ಕ ಟ್ರಾಕ್ಟರ್‌ಗಳಲ್ಲಿ 5 ಪರ್ಸೆಂಟ್ ಬಿಟ್ಟರೆ ಉಳಿದ ಎಲ್ಲ ಟ್ರಾಕ್ಟರುಗಳು ವರ್ಕಿಂಗ್ ಕಂಡೀಷನ್‌ನಲ್ಲಿವೆ. ಸ್ಪಷ್ಟವಾಗಿ ಸರ್ಕಾರ ನಿರ್ದೇಶನ ಕೊಟ್ಟಿದೆ. ಕೆಟ್ಟಿರುವುದನ್ನು ರಿಪೇರಿ ಮಾಡಿಸಿ ಅಪ್‌ಟುಡೇಟ್ ಕಂಡಿಶನ್‌ನಲ್ಲಿ ಇಟ್ಟುಕೊಳ್ಳಬೇಕೆಂದು. ಮಿಕ್ಕವನು ಡಿಸ್‌ಪೋಸ್ ಮಾಡಿ ಎಂದು ಹೇಳಿದ್ದೇವೆ.

6-00 P.M.

ಆದುದರಿಂದ ಕೆಲಸ ಮಾಡತಕ್ಕ ಸ್ಥಿತಿಯಲ್ಲಿ ಇರತಕ್ಕದ್ದು ಮಾಡಿದ್ದೇವೆ. ರೈತರಿಗೆ ಸಹಾಯ ಮಾಡಲು ಆಗ್ರೋ ಬೇಸ್ಡ್ ಇಂಡಸ್ಟ್ರೀಸ್ ಸ್ಟಾರ್ಟ್ ಮಾಡಿ ರೈತರಿಗೆ ಅವನು ಏನು ಬೆಳೆಯುತ್ತಾನೆ ಅದನ್ನು ದೇಶದಲ್ಲಿ ಇಂಟರ್‌ನಲ್ ಕನ್‌ಸಮ್‌ಷನ್ ಮಾಡಿ ಉಳಿದದ್ದನ್ನು ಎಕ್ಸ್‌ಪೋರ್ಟ್ ಮಾಡುವುದಕ್ಕೆ ಅವಕಾಶ ಕೊಡಬೇಕು. ಟೊಮೊಟೋ, ಫೈನಾಪಲ್ ಮತ್ತು ಮ್ಯಾಂಗೋಗಳ ಪ್ರೊಸೆಸಿಂಗ್ ಪ್ಲಾಂಟ್ ಹಾಕಬೇಕು. ಅನಂತರ ರಾಯಚೂರು ಭಾಗದಲ್ಲಿ ಹತ್ತಿಬೀಜ, ಎಣ್ಣೆ ಕಾಳುಗಳನ್ನು ಪ್ರೊಸೆಸ್ ಮಾಡುವ ಪ್ಲಾಂಟ್ ಹಾಕಬೇಕು. ಹುಬ್ಬಳಿಯಲ್ಲಿ ಪೆಸ್ಟಿಸೈಡ್ಸ್ ಯೂನಿಟ್ ಹಾಕಬೇಕು. ಅಲ್ಲಿ ಮೆಕಾನಿಕಲ್ ಬೇಸ್ಡ್ ಪ್ಲಾಂಟ್ ಹಾಕಬೇಕು. ರೈತರು ಬೆಳೆಯತಕ್ಕ ವರ್ಜೀನಿಯಾ ಟೊಬೆಕೋವನ್ನು ಮೈಸೂರು ಟೊಬೆಕೋ ಕಂಪನಿಗೆ ಕೊಡಲು ಹಿಂದಿನ ಸರ್ಕಾರದವರು ಮಾಡಿದ ವ್ಯವಸ್ಥೆ ಸರಿಯಿಲ್ಲ. ಹೊಗೆಸೊಪ್ಪು ಬೆಳೆಯುವವರಿಗೆ ರಕ್ಷಣೆಯನ್ನು ಕೊಡುತ್ತಾ ಇಲ್ಲ ಎಂದು ಹೇಳಿದರು. ಮಾರ್ಕೆಟಿಂಗ್ ಫೆಡರೇಷನ್ ಟೊಬೆಕೋ ಯೂನಿಟ್ ಸ್ಟಾರ್ಟ್ ಮಾಡಿ ಬೆಳೆದಂತ ಹೊಗೆಸೊಪ್ಪನ್ನು ಪ್ರೊಸೆಸ್ ಮಾಡುವುದಕ್ಕೆ ಸಪರೇಟ್ ಯೂನಿಟ್ ಮಾಡುತ್ತೇವೆ. ಶ್ರೀಮಾನ್ ಬಂಗಾರಪ್ಪನವರು ನಿನ್ನೆ ಹೇಳಿದರು ಆಗ್ರೋ ಕ್ಲೈಮಾಟಿಕ್ ಕಂಡಿಷನ್ ಪ್ರಕಾರ ಡಿವಿಷನ್ ಮಾಡಬೇಕು ಎಂದು. ಅದನ್ನು ಗಮನದಲ್ಲಿಟ್ಟುಕೊಂಡು ಆಗ್ರೋ ಕ್ಲೈಮಾಟಿಕ್ ಕಂಡಿಷನ್ ಮೇಲೆ ರಾಜ್ಯವನ್ನು ವಿಂಗಡಿಸಬೇಕು ಎಂದು ಮಾಡಿದ್ದೇವೆ. ಕ್ರಾಪ್ಸ್ ಪ್ಯಾಟರ್ನ್, ಟ್ರೆಡಿಷನಲ್ ಸಿಸ್ಟಂ, ಟೈಪ್ಸ್ ಆಫ್ ಸಾಯಿಲ್ ಮತ್ತು ರೈನ್‌ಫಾಲ್ ಗಮನದಲ್ಲಿಟ್ಟುಕೊಂಡು ಇವತ್ತು ಏನು ಬೆಳೆಗಳನ್ನು ತೆಗೆಯಬೇಕು, ಅದಕ್ಕೆ ಕ್ರಾಪ್ ಫ್ಯಾಟರ್ನ್ ಇರಬೇಕು ಎಂದು ಮಾಡಿದ್ದೇವೆ. ಇದನ್ನು ಮಳೆ ಬರತಕ್ಕ ಏರಿಯಾದಲ್ಲಿ ಮಾಡಿದ್ದೇವೆ ಸಮಗ್ರ ಒಣ ಬೇಸಾಯ ಯೋಜನೆಯನ್ನು ಬಿಜಾಪುರ. ಬೆಂಗಳೂರು ಜಿಲ್ಲೆಯ ದೊಡ್ಡಬಳ್ಳಾಪುರ ಮತ್ತು ಬಳ್ಳಾರಿ ಈ ಮೂರು ಜಿಲ್ಲೆಗಳಲ್ಲಿ ತೆಗೆದುಕೊಂಡಿದ್ದೇವೆ. ಮಾನ್ಯ ಶ್ರೀಮಾನ್ ನಾಯುಡುರವರು ಹೇಳಿದರು ಕ್ರಾಪ್ ಇನ್‌ಷ್ಯೂರೆನ್ಸ್ ಮಾಡಬೇಕು ಎಂದು. ಕ್ರಾಪ್ ಇನ್‌ಷೂರೆನ್ಸ್ ಮಹಾರಾಷ್ಟ್ರದಲ್ಲಿ ಮಾಡಿಲ್ಲ. ಗುಜರಾತ್‌ನಲ್ಲಿ ಮಾಡಿಲ್ಲ. ಗುಜರಾತಿನಲ್ಲಿ ಮಾಡಿರತಕ್ಕ ಗುಜರಾತ್ ಸ್ಟೇಟ್ ಫರ್ಟಿಲೈಸರ್ ಕಾರ್ಪೊರೇಷನ್ ನಿದರ್ಶನವಾಗಿ ಯಾವರೀತಿ ಕ್ರಾಪ್ ಇನ್‌ಷೂರೆನ್ಸ್ ಒಳ್ಳೆಯದಾಗುತ್ತದೆ ಎಂದು ಒಂದು ಯೋಜನೆ ಮಾಡಿದರು. ಅದು ಯಶಸ್ವಿ ಆಗಲಿಲ್ಲ. ಕ್ರಾಪ್ ಇನ್‌ಷೂರೆನ್ಸ್ ಬಗ್ಗೆ ಮಾಹಿತಿ ಒದಗಿಸಿದರೆ ಕ್ರಾಪ್ ಫೈಲ್ಯೂರ್ ಆದ ಕಾಲದಲ್ಲಿ ಟೆಕ್ನಿಕಲ್ ಡಾಟಾ ತೆಗೆದುಕೊಂಡು ಅದನ್ನು ಕಾರ್ಯಗತ ಮಾಡುವುದು ಕಷ್ಟವಾಗುತ್ತದೆ. ಒಂದೆರಡು ರೊಕ್ಕದ ಬೆಳೆಗಳಿಗೆ ಗ್ಯಾರೆಂಟೆಡ್ ಕ್ರಾಪ್ ಬರತಕ್ಕ ಕಡೆ ಮಾಡಿ ಎಂದು ಹೇಳಿದ್ದೇವೆ. ಆಲ್ ಇಂಡಿಯಾ ಜನರಲ್ ಇನ್‌ಷ್ಯೂರೆನ್ಸ್ ಕಾರ್ಪೊರೇಷನ್ ಈ ಬಗ್ಗೆ ಕಾರ್ಯಕ್ರಮ ತೆಗೆದುಕೊಳ್ಳಬೇಕು. ಒಂದೆರಡು ಬೆಳೆಗಳಿಗೆ ಕ್ಯಾಷ್ ಕ್ರಾಪ್ಸ್ ಇನ್‌ಷ್ಯೂರೆನ್ಸ್ ಸ್ಕೀಮ್ ಇನ್‌ಟ್ರಡ್ಯೂಸ್ ಮಾಡಿ ಎಂದು ಕೇಳಿಕೊಂಡಿದ್ದೇವೆ. ಇದು ಆಲ್ ಇಂಡಿಯಾ ಪಾಲಿಸಿ ಆಗಿರುವುದರಿಂದ ಜನರಲ್ ಇನ್‌ಷೂರೆನ್ಸ್‌ನವರು ಇದರ ಬಗ್ಗೆ ಕಾರ್ಯಕ್ರಮ ತೆಗೆದುಕೊಳ್ಳಬೇಕು. ಅವರನ್ನು ಒಪ್ಪಿಸಬೇಕಾದುದು ಇದೆ. ಮಾನ್ಯ ಸದಸ್ಯರು ಹೇಳಿದ ಹಾಗೆ ಅಷ್ಯೂರ್ಡ್ ಇರಿಗೇಷನ್, ಅಷ್ಯೂರ್ಡ್ ಕ್ರಾಪ್ ಎಲ್ಲಿ ಇದೆ ಅಲ್ಲಿ ಇದನ್ನು ತೆಗೆದುಕೊಳ್ಳತಕ್ಕಂಥಾದ್ದು ಸೂಕ್ತವಾಗಿದೆ. ಸರ್ಕಾರದ ವತಿಯಿಂದ ಇದಕ್ಕೆ ಪ್ರೋತ್ಸಾಹ ಕೊಡಬೇಕು ಮತ್ತೆ ಒತ್ತಾಯ ಮಾಡಬೇಕು. ನಾನು ಅಧ್ಯಕ್ಷಿಣಿಯವರ ಮೂಲಕ ಭರವಸೆಯನ್ನು ಕೊಡುತ್ತೇನೆ. ಪಶುಪಾಲನ ಇಲಾಖೆ ಮತ್ತು ಹೈನುಗಾರಿಕೆಯ ಬಗ್ಗೆ ಅನೇಕ ಸದಸ್ಯರು ಮಾತನಾಡಿಲ್ಲ. ಈ ವರ್ಷ 1974-75ರಲ್ಲಿ ಏನು ಕಾರ್ಯಕ್ರಮವನ್ನು ತೆಗೆದುಕೊಂಡಿದ್ದಾರೆ ಎಂಬುದನ್ನು ಹೇಳಬೇಕಾಗಿದೆ. ಮುಖ್ಯವಾಗಿ ನಮ್ಮ ಕರ್ನಾಟಕದ ಡೈರಿ ಡೆವೆಲಪ್‌ಮೆಂಟ್ ಕಾರ್ಪೊರೇಷನ್ ವಿಶ್ವ ಬ್ಯಾಂಕ್‌ನಿಂದ ಪಡೆದಿರತಕ್ಕ 50 ಕೋಟಿ ರೂಪಾಯಿಯ ಒಂದು ಯೋಜನೆ ಇದೆ. ಇದರ ಬಗ್ಗೆ ನಾನು ಈ ಸಭೆಯಲ್ಲಿ ಹಣಕಾಸಿನ ಮಂತ್ರಿಗಳ ಜನರಲ್ ಡಿಮ್ಯಾಂಡ್ ಮೇಲೆ ಹೇಳುವ ಕಾಲದಲ್ಲಿ ಸಮಗ್ರ ಹೈನುಗಾರಿಕೆ ಯೋಜನೆಯನ್ನು, ವಿಶ್ವ ಬ್ಯಾಂಕ್ ಮೂಲಕ ಬರುವ ಯೋಜನೆಯನ್ನು ಚಿಕ್ಕಮಗಳೂರು, ಹಾಸನ, ಕೊಡಗು, ಮಂಡ್ಯ, ಮೈಸೂರು, ಬೆಂಗಳೂರು, ಕೋಲಾರ, ಮತ್ತು ತುಮಕೂರು ಈ 8 ಜಿಲ್ಲೆಗಳಲ್ಲಿ ಈ ಕರ್ನಾಟಕ ಡೈರಿ ಡೆವೆಲಪ್‌ಮೆಂಟ್ ಕಾರ್ಪೊರೇಷನ್ ವತಿಯಲ್ಲಿ ಮಾಡಿದ್ದೇವೆ.

ಶ್ರೀ ಎಸ್. ಬಂಗಾರಪ್ಪ.—ಶಿವಮೊಗ್ಗವನ್ನು ಏತಕ್ಕೆ ಬಿಟ್ಟಿರಿ ?

ಶ್ರೀ ಎಸ್. ಚಿಕ್ಕೇಗೌಡ.—ಹೆಚ್ಚು ಮಳೆ ಬರುವ ಕಡೆ ತೊಂದರೆಯಾಗುತ್ತದೆ ಎಂದು ತೆಗೆದುಕೊಂಡಿಲ್ಲ. ವರ್ಲ್ಡ್ ಬ್ಯಾಂಕ್‌ನವರು ಮತ್ತು ತಮ್ಮ ಟೆಕ್ನಿಕಲ್ ಎಕ್ಸ್‌ಪರ್ಟ್ಸ್ ಹೇಳಿದ ಪ್ರಕಾರ ಸ್ಕೀಮ್‌ನ್ನು ತೆಗೆದುಕೊಂಡಿರುವುದು.

ಶ್ರೀ ಎಸ್. ಬಂಗಾರಪ್ಪ.—ಮಳೆ ಜಾಸ್ತಿ ಆದಲ್ಲಿ ಅದಕ್ಕೆ ಹೊಂದಿಕೊಳ್ಳತಕ್ಕ ಬ್ರೀಡ್ ತಯಾರು ಮಾಡಬಹುದಿತ್ತು.

ಶ್ರೀ ಎನ್. ಚಿಕ್ಕೇಗೌಡ.—ಬ್ರೆನ್, ಸ್ವಿಡ್ಜರ್‌ಲೆಂಡ್‌ಗಳಲ್ಲಿ ಮಾಡಿದ್ದಾರೆ. ಅದರ ಪ್ರಕಾರ ಯೋಜನೆ ಮಾಡುತ್ತಿದ್ದೇವೆ. ಹುಬ್ಬಳ್ಳಿ ಏರಿಯಾದಲ್ಲಿ ಇಂಡೋ ಡೆನಿಷ್ ಪ್ರಾಜೆಕ್ಟನ್ನು ಮಾಡಿದ್ದೇವೆ. ಇನ್‌ಟೆನ್‌ಸಿವ್ ಕ್ಯಾಟಲ್ ಡೆವೆಲಪ್‌ಮೆಂಟ್ ಪ್ರಾಜೆಕ್ಟ್ ಸಹ ಹುಬ್ಬಳ್ಳಿ ಧಾರವಾಡದಲ್ಲಿ ಮಾಡಿದ್ದೇವೆ. ಕರ್ನಾಟಕ ಡೈರಿ ಡೆವೆಲಪ್‌ಮೆಂಟ್ ಕಾರ್ಪೊರೇಷನ್ ಮತ್ತು ವಿಶ್ವಬ್ಯಾಂಕಿನ ಅನುಮತಿ ಬಂತು ಎಂದು ಕಳೆದ ಸಾಲಿನ ಅನಿಮಲ್ ಹಸ್‌ಬೆಂಡರಿ ಡಿಮ್ಯಾಂಡ್ ಬಗ್ಗೆ ಮಾತನಾಡುವ ಕಾಲದಲ್ಲಿ ಹೇಳಿದ್ದೇನೆ. ಅನೇಕ ಸದಸ್ಯರಿಗೆ ಮತ್ತು ರಾಜ್ಯದ ಜನತೆಗೆ ನಿಜವಾಗಿ ಇದು ಕಾರ್ಯಗತವಾಗುತ್ತದೆಯೇ, ವಿಶ್ವಬ್ಯಾಂಕ್‌ನವರು ಸಾಲ ಸೌಲಭ್ಯ ಕೊಡುತ್ತಾರೆಯೇ ಎಂದು ಅನುಮಾನ ಇತ್ತು. ಅವರು ಕೊಟ್ಟಿದ್ದಾರೆ. ಕಳೆದ ಡಿಸೆಂಬರ್ 23ರಿಂದ ಈ ಯೋಜನೆ ಜಾರಿಗೆ ಬಂದಿದೆ. ಇದಕ್ಕೆ ವಿಶ್ವಬ್ಯಾಂಕಿನ ಮತ್ತು ಭಾರತ ಸರ್ಕಾರದ ಅನುಮತಿ ಬಂದಿದೆ. ಮುಖ್ಯವಾಗಿ ಈ 8 ಜಿಲ್ಲೆಗಳಲ್ಲಿ ಯೂನಿಯನ್ಸ್ ಮಾಡಬೇಕು. ಈ ಯೂನಿಯನ್ಸ್ ಪತಿಯಲ್ಲಿ 1800 ಹಾಲಿನ ಸಹಕಾರ ಸಂಘವನ್ನು ಸ್ಥಾಪಿಸಬೇಕು. ನಾವು ಈ ವರ್ಷ ಈ ಯೋಜನೆಯನ್ನು 8 ವರ್ಷಗಳ ಕಾಲ ಹಂತಹಂತವಾಗಿ ಮಾಡುತ್ತೇವೆ. ಹಾಸನದಲ್ಲಿ, ತುಮಕೂರಿನಲ್ಲಿ ಹೊಸ ಡೈರಿ ಪ್ಲಾಂಟ್ ಹಾಕುತ್ತೇವೆ. ಮೈಸೂರಿನಲ್ಲಿ 3ಲಕ್ಷ 10 ಸಾವಿರ ಲೀಟರ್, ಬೆಂಗಳೂರಿನಲ್ಲಿ 3ಲಕ್ಷ 50 ಸಾವಿರ ಲೀಟರ ಕೆಪಾಸಿಟಿ ಹಾಕುತ್ತೇವೆ. ಹಾಸನ ಮತ್ತು ತುಮಕೂರಿನಲ್ಲಿ 2 ಲಕ್ಷ ಲೀಟರಿನ ಕೆಪಾಸಿಟಿ ಇರುವ 2 ಡೈರಿ ಪ್ಲಾಂಟ್ ಹಾಕುತ್ತೇವೆ. ಇದು 8 ವರ್ಷಗಳ ಯೋಜನೆ, ಇದನ್ನು ಹಂತಹಂತವಾಗಿ ಮಾಡಬೇಕು. ಈ ವರ್ಷದಲ್ಲಿ 180 ಕೋ-ಅಪರೇಟಿವ್ಸ್ ಮಾಡಬೇಕು ಎಂದು ಯೋಚನೆ ಮಾಡಿದ್ದೇವೆ. ಇದಕ್ಕೆ 4½ ಲಕ್ಷ ರೈತ ಕುಟುಂಬಗಳು ಈ ಯೋಜನೆಯಲ್ಲಿ ಸಹಾಯ ಸೌಲಭ್ಯವನ್ನು ಪಡೆಯುತ್ತಾರೆ. ಈ ಯೋಜನೆಯಲ್ಲಿ ಅವರು ಭಾಗಿಗಳಾಗಬೇಕು. ಒಂದು ಕುಟುಂಬದಲ್ಲಿ ಆರು ಜನ ಎಂದರೆ 25 ಲಕ್ಷ ಜನತೆಗೆ ನಮ್ಮ ರಾಜ್ಯದಲ್ಲಿ 8 ಜಿಲ್ಲೆಯಲ್ಲಿ ಇರತಕ್ಕ ಜನತೆಗೆ 4½ ಲಕ್ಷ ರೈತ ಕುಟುಂಬಗಳಿಗೆ ಈ ಯೋಜನೆಯ ಫಲ ದೊರಕುತ್ತದೆ. 8ವರ್ಷದಲ್ಲಿ 5ಲಕ್ಷ ಮಿಶ್ರ ತಳಿಗಳನ್ನು ಪಾಲನೆಮಾಡಿ ಪೋಷಣೆಮಾಡಿ ಹಾಲು ಉತ್ಪಾದನೆ ಮಾಡಬೇಕು. ಅಂದರೆ 20 ಲಕ್ಷ ಲೀಟರ್ ಹಾಲು ಉತ್ಪಾದನೆ ಮಾಡಬೇಕು. 31½ ಲಕ್ಷ ರೂಪಾಯಿಯ ಉತ್ಪಾದನೆ ಬರಬೇಕು. The expected quantity to be process every day retaining 40 per cent for local consumption. 12 ಲಕ್ಷ ಲೀಟರ್ ಪ್ರೋಸೆಸ್ ಆಗಬೇಕು. ಡೈರಿ ಪ್ಲಾಂಟ್‌ನಲ್ಲಿ 18ಲಕ್ಷ ರೂಪಾಯಿ ಆದಾಯ ಬರಬಹುದು. ಪ್ರೋಸೆಸಿಂಗ್ ಫೆಸಿಲಿಟಿಯಲ್ಲಿ 10 ಲಕ್ಷ ಲೀಟರ್ ಪ್ರೋಸೆಸ್ ಮಾಡಬಹುದು. ಉಳಿದ 2ಲಕ್ಷ ಲೀಟರ್ ಈ ಮಿಲ್ಕ್ ಪೌಡರ್ ಮತ್ತು ಇತರ ಪ್ರಾಡಕ್ಟ್‌ಗೆ ಕನ್‌ವರ್ಟ್ ಮಾಡಬೇಕು. ಒಟ್ಟಿನಲ್ಲಿ ಇದು 65 ಕೋಟಿ 7 ಲಕ್ಷ ರೂಪಾಯಿ ಇದರಿಂದ ಆದಾಯ ಬರತಕ್ಕ ಯೋಜನೆ ಆಗಿದೆ. ಇದು ಬಹಳ ದೊಡ್ಡ ಯೋಜನೆಯಾಗಿದೆ. ಇದನ್ನು ನಿಜವಾಗಿ ರೈತರು ಸ್ವಾಗತಿಸುತ್ತಾರೆ; ಮಾನ್ಯ ಸದಸ್ಯರ, ಜನತೆಯ ಕಾರ ಬೇಕಾಗಿದೆ ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇಡೀ ಏಷ್ಯಾ ಖಂಡದಲ್ಲಿ ಈ ಹಾಲಿನ ಯೋಜನೆಗೆ ವಿಶ್ವಬ್ಯಾಂಕಿನ ನೆರವಿನಿಂದ ಸಾಲ ಕೊಡುವುದು ಪ್ರಥಮವಾದುದು. ಇಡೀ ಭಾರತದಲ್ಲಿ ಕರ್ನಾಟಕ ರಾಜ್ಯದಲ್ಲಿ ಹಾಲಿನ ಡೈರಿ ಡೆವೆಲಪ್ ಆಗುವುದಕ್ಕೆ ಅನುಕೂಲವಾಗುತ್ತದೆ. ಕೆಲವು ಮಾನ್ಯ ಸದಸ್ಯರು ರಾಜ್ಯದಲ್ಲಿ ಇರತಕ್ಕ ಮಿಶ್ರತಳಿ ಹಸುಗಳು ಹೊರರಾಜ್ಯಕ್ಕೆ ಬಹಳ ಮಾರಾಟವಾಗುತ್ತಿವೆ ಎಂದು ಹೇಳಿದರು, ಸರ್ಕಾರ ಇದರ ಬಗ್ಗೆ ತೀವ್ರವಾಗಿ ಪರಿಶೀಲಿಸುತ್ತಿದೆ, ಮೈಸೂರು ರಾಜ್ಯದಲ್ಲಿ ಹೆಚ್ಚು ಇರುವ ಮಿಶ್ರತಳಿಯನ್ನು ಭಾರತದಾದ್ಯಂತ, ಗುಜರಾತ್ ಮಧ್ಯಪ್ರದೇಶ ಇನ್ನಿತರ ದೇಶಗಳವರು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಒಂದು ಲಕ್ಷ ಮಿಶ್ರತಳಿ ಹಸು ಇದೆ. 5 ಲಕ್ಷ ಮಿಶ್ರ ತಳಿಯನ್ನು ಪಾಲನೆ ಪೋಷಣೆ ಮಾಡುವ ಯೋಜನೆ ಇಟ್ಟುಕೊಂಡಿದ್ದೇವೆ. ಮಾರಾಟ ಮಾಡುವುದರ ಮೇಲೆ ನಿರ್ಬಂಧ ಹಾಕಬೇಕಾಗಿದೆ. ಬೆಂಗಳೂರಿನಲ್ಲಿ ಇರತಕ್ಕ ಸ್ಲಾಟರ್ ಹೌಸ್ ವ್ಯವಸ್ಥಿತ ರೀತಿಯಲ್ಲಿ ಮತ್ತು ಪರಿಶುದ್ಧವಾದ ರೀತಿಯಲ್ಲಿ ನಡೆಯುತ್ತಾ ಇಲ್ಲ. ಇದಕ್ಕಾಗಿ ಅನಿಮಲ್ ಫುಡ್ ಕಾರ್ಪೊರೇಷನ್ ಮತ್ತು ಬೆಂಗಳೂರು ನಗರ ಕಾರ್ಪೊರೇಷನ್ ಸೇರಿ 10ಕೋಟಿ ರೂಪಾಯಿ ಸಾಲ ಪಡೆದು, ಇದಕ್ಕೆ ಬೇಕಾದಂಥ ಯಂತ್ರವನ್ನು ಜೋಡಿಸಿ ಅದರ ಮೂಲಕ ಮಾಡ್ರನ್ ಸ್ಲಾಟರ್ ಬೈಪ್ರೊಡಕ್ಟ್ ಮಾಡುವ ಯೋಚನೆ ಮಾಡುತ್ತಿದ್ದೇವೆ. ಒಟ್ಟಿನಲ್ಲಿ ಪಶುಪಾಲನೆ ಇಲಾಖೆಯಲ್ಲಿ ಅನೇಕ ವಿಚಾರಗಳನ್ನು ಹೇಳಬೇಕಾಗುತ್ತದೆ. ಪಶುಪಾಲನೆ ಇಲಾಖಾ ವತಿಯಲ್ಲಿ ರಾಜ್ಯದಲ್ಲಿರತಕ್ಕ ಎರಡು ಪ್ರಸಿದ್ಧವಾದ ತಳಿಗಳು ಎಂದರೆ, ಹಳ್ಳಿಕಾರು ಮತ್ತು ಅಮೃತ್‌ಮಹಲ್. ವ್ಯವಸಾಯಕ್ಕೆ ಯೋಗ್ಯವಾದ ಕರುಗಳನ್ನೂ ಎತ್ತುಗ

ಳನ್ನೂ ಉಪಯೋಗಿಸಿ ವ್ಯವಸಾಯ ಮಾಡುವುದಕ್ಕೆ ಬೇಕಾಗುತ್ತದೆ. ಕರ್ನಾಟಕ ರಾಜ್ಯದಲ್ಲಿ ಮೂರು ತಳಿ ಇದೆ, ಅದರಲ್ಲಿ ಹಳ್ಳಿಕಾರು ತಳಿ ಉಳಿಸಿಕೊಂಡು ಪಶುಪಾಲನೆ ಇಲಾಖೆಗೆ ಪ್ರೋತ್ಸಾಹ ಕೊಡಬೇಕು. ಅಮೃತ್‌ಮಹಲ್ ಕಾವಲಿನಲ್ಲಿ ಹೆಚ್ಚು ದನಗಳನ್ನು ಸಾಕತಕ್ಕ ಏರ್ಪಾಡು ಇದೆ, ಸುಮಾರು ಎರಡು ಸಾವಿರ ಹಸುಗಳು ಇವೆ. ಇನ್ನೂ ಹೆಚ್ಚು ಅಭಿವೃದ್ಧಿ ಮಾಡಬೇಕಾಗಿದೆ. ಹಳ್ಳಿಕಾರು ತಳಿ ಮೈಸೂರು, ಮಂಡ್ಯ ಮತ್ತು ತುಮಕೂರು ಭಾಗದಲ್ಲಿ ಇದೆ. ಆ ಕಡೆ ಹಳ್ಳಿಕಾರು ಫಾರಂ ಮಾಡಬೇಕೆಂದು ಸರ್ಕಾರ ಯೋಚನೆ ಮಾಡಿದೆ. ಅದಕ್ಕೆ ಬೇಕಾದ ಸ್ಥಳವನ್ನು ಪರಿಶೀಲಿಸುತ್ತದೆ. ಆಂಧ್ರ ಪ್ರದೇಶದಲ್ಲಿತ್ತು ಅದು ಹೇಳುತ್ತಿದ್ದಾರೆ. ಬೀದರ್ ಭಾಗದಲ್ಲಿ ದೇವನಿ ಕ್ಯಾಟಲ್ ಫಾರಂ ಮಾಡಬೇಕೆಂದು ಸರ್ಕಾರದಿಂದ ಆಜ್ಞೆ ಹೊರಡಿಸಿದ್ದೇವೆ, ಅದಕ್ಕೂ ಸಹ ಸ್ಥಳವನ್ನು ಆಕ್ರಮಿಸಿಕೊಂಡು ಫಾರಂಗೆ ಪ್ರಾರಂಭ ಮಾಡುತ್ತೇವೆ. ಒಟ್ಟಿನಲ್ಲಿ ತಳಿ ಅಭಿವೃದ್ಧಿ ಬಗ್ಗೆ ತಳಿಗಳಿಗೆ ಹಾಗೂ ದನಗಳಿಗೂ ಬರತಕ್ಕ ರೋಗರುಜಿನಗಳನ್ನು ತಡೆಗಟ್ಟುವ ದಿಸೆಯಲ್ಲಿ ಪಶುವೈದ್ಯ ಶಾಲೆಗಳನ್ನು ಸ್ಥಾಪನೆ ಮಾಡುವುದು, ಹೊಸದಾಗಿ ಮಂಜೂರುಮಾಡಿರುವುದನ್ನು ನೋಡಿದರೆ, ಇಡೀ ಭರತಖಂಡದಲ್ಲಿಯೇ ನಮ್ಮ ರಾಜ್ಯದಲ್ಲಿರುವಷ್ಟು ಪಶುವೈದ್ಯಶಾಲೆಗಳು ಬೇರೆ ಎಲ್ಲೂ ಇಲ್ಲ. ಸರಾಸರಿ 10 ಸಾವಿರ, 12 ಸಾವಿರ ಜಾನುವಾರುಗಳಿಗೆ ಒಂದೊಂದು ಆಸ್ಪತ್ರೆ ಇದೆ. ಕಳೆದ ಎರಡು ವರ್ಷ ಈ ಸರ್ಕಾರ ಅಸ್ತಿತ್ವಕ್ಕೆ ಬಂದಮೇಲೆ, 45 ಪಶುವೈದ್ಯಶಾಲೆಗಳನ್ನು ಮಂಜೂರು ಮಾಡಿದ್ದೇವೆ, ಇರತಕ್ಕ 25 ಆಸ್ಪತ್ರೆಗಳನ್ನು ಅಪ್‌ಗ್ರೇಡ್ ಮಾಡಿದ್ದೇವೆ. ಕಳೆದ ವರ್ಷ 140 ಹೊಸ ಆಸ್ಪತ್ರೆಗಳನ್ನು ಕಟ್ಟಿದ್ದೇವೆ, 25 ಅಪ್‌ಗ್ರೇಡ್ ಮಾಡಿದ್ದೇವೆ. 1186 ಪಶುವೈದ್ಯ ಶಾಲೆಗಳು ರಾಜ್ಯದಲ್ಲಿ ಇವೆ. ಅದೇ ರೀತಿ ಸಾಂಕ್ರಾಮಿಕ ರೋಗ, ಸಪ್ಪೆ ಜಾಡ್ಯ ತಡೆಗಟ್ಟುವುದಕ್ಕೆ ವ್ಯವಸ್ಥೆ ಮಾಡಿ, 10 ಸಾವಿರ ಜಾನುವಾರುಗಳಿಗೆ ಒಂದು ಆಸ್ಪತ್ರೆ ಇರಬೇಕೆಂದು ಮಾಡಿದ್ದೇವೆ ಪ್ರತಿ ವರ್ಷ ರೆಕರಿಂಗ್ ಎಕ್ಸಪೆಂಡೀಚರ್ ಏರುತ್ತದೆ. ಎಲ್ಲಿಗೆ ಬೇಕೋ ಅಲ್ಲಿಗೆ ಕೊಡುವುದಕ್ಕೆ ಅವಕಾಶ ಮಾಡೋಣ. ಕಾಫ್ಸ್ ಬ್ರೀಡಿಂಗ್ ಸೆಂಟರ್ಸನ್ನು ಅಜ್ಜಂಪುರ ಮತ್ತು ಬೀರೂರಿನಲ್ಲಿ ಪ್ರಾರಂಭ ಮಾಡಿದ್ದೇವೆ. ಅದೇ ರೀತಿ ನಾಯಿಡು ಮತ್ತು ನಂಜೇಗೌಡರು ಅಮೃತ್‌ಮಹಲ್ ಮತ್ತು ಹಳ್ಳಿಕಾರು ತಳಿಬಗ್ಗೆ ಬಹಳ ಕಾತುರರಾಗಿದ್ದಾರೆ, ಕಾಫ್ಸ್ ಬ್ರೀಡಿಂಗ್, ಕ್ಯಾಟಲ್ ಬ್ರೀಡಿಂಗ್, ರೀಸರ್ಚ್ ಫಾರ್ಮ್ಸ್ ಹಾಗೂ ಹಳ್ಳಿಕಾರು ಮತ್ತು ಅಮೃತಮಹಲ್ ಜೊತೆಗೆ ದೇವನಿ ಕ್ಯಾಟಲ್ ಫಾರ್ಮ್ಸ್ ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ. ಅಷ್ಟೇ ಮುಖ್ಯವಾಗಿ ಕುರಿ ಅಭಿವೃದ್ಧಿ ಬಗ್ಗೆ ಸಮಗ್ರ ಯೋಜನೆ ಒಂದು ಮಾಡುತ್ತಿದ್ದೇವೆ. ವಿಶ್ವ ಬ್ಯಾಂಕಿನಿಂದ 30-40 ಕೋಟಿ ರೂಪಾಯಿ ಪಡೆದು ಬನ್ನೂರೂ ಹಾಗೂ ಹಾಸನ ಕುರಿ ಅಭಿವೃದ್ಧಿಗೆ ಪ್ರಯತ್ನ ಮಾಡುತ್ತಿದ್ದೇವೆ. ಅದಕ್ಕಾಗಿ ಆಸ್ಟ್ರೇಲಿಯಾದಿಂದ 15 ಟಗರುಗಳನ್ನು ತರಿಸಿ ಹಳ್ಳಿಕಾರು ಫಾರಂನಲ್ಲಿ ಇಟ್ಟಿದ್ದೇವೆ. ಡೆಕನಿ ಷೀಪ್ ತಂದು ಸಾಕುವುದರಿಂದ ಅವುಗಳನ್ನು ಅಭಿವೃದ್ಧಿ ಮಾಡುವುದು ಮತ್ತು ಬಂದೂರ್ ಷೀಪ್ಸ್ ಅಭಿವೃದ್ಧಿ ಮಾಡುವ ಬಗ್ಗೆ ಸಮಗ್ರ ಯೋಜನೆ ಮಾಡಿ, 300 ಕೋಟಿ ರೂಪಾಯಿ ಸಾಲ ಪಡೆದು ಕುರಿ ಸಾಕಾಣಿಕೆ ಅಭಿವೃದ್ಧಿ ಮಾಡಿ ಬಡವರಿಗೆ ಅನುಕೂಲ ಮಾಡಿಕೊಡಬೇಕೆಂದು ತೀರ್ಮಾನ ಮಾಡಿದ್ದೇವೆ. ಫ್ರೀಸ್ ಸಮನ್ ಬ್ಯಾಂಕ್ ಮಾಡುತ್ತೇನೆ. ಇಂಡೋ ಡ್ಯಾನಿಷ್ ಅಗ್ರಿಮೆಂಟ್ ಪ್ರಕಾರ ಕೊಟ್ಟಿದ್ದೇವೆ. ವೀರ್ಯವನ್ನು ತರಿಸಿ ಮಿಶ್ರ ತಳಿಗಳನ್ನು ಅಭಿವೃದ್ಧಿ ಮಾಡಬೇಕೆಂದು ಯೋಚನೆ ಮಾಡುತ್ತಿದ್ದೇವೆ. ಮೈಸೂರು ಸ್ಟಿರಮ್ ಇನ್‌ಸ್ಟಿಟ್ಯೂಟ್ ಮಾಡರನ್ ಗ್ರೇಡ್‌ಗೆ ತರಬೇಕು ಎಂದು ಆಲೋಚನೆ ಮಾಡುತ್ತಿದ್ದೇವೆ. ಫ್ರೀಸ್ ಡ್ರೈಯಿಂಗ್ ಯೂನಿಟ್ಸ್ ಇದೆ. ಪಶುಪಾಲನೆ, ಕುರಿ ಸಾಕಾಣಿಕೆ, ಕೋಳಿ ಸಾಕಾಣಿಕೆ ಬಗ್ಗೆ ಅನೇಕ ವರ್ಷಗಳಿಂದ ಆಗದೇ ಇದ್ದು ಪ್ರಗತಿ ಆಗಿದೆ. ಸದನದಲ್ಲಿ ಹೊರಗಡೆ ಏನು ಹೇಳಿದ್ದೇನೆ, ವಿಶ್ವ ಬ್ಯಾಂಕ್‌ನಿಂದಲಾಗಲೀ ರಾಜ್ಯ ಸರ್ಕಾರದಿಂದಲಾಗಲೀ ಅಥವಾ ಸಂಘ ಸಂಸ್ಥೆಗಳಿಂದಲಾಗಲೀ ಋಣ ಪಡೆದು ಇವುಗಳನ್ನೆಲ್ಲಾ ಕಾರ್ಯಗತ ಮಾಡಿದ್ದೇವೆ ಎಂದು ಹೇಳಿ, ಅಧ್ಯಕ್ಷರ ಮೂಲಕ ತಮಗೆ ತಿಳಿಸಿ, ದಯವಿಟ್ಟು ತಾವು ಏಕರೀತಿಯಿಂದ ಮತ್ತು ವಿರೋಧವಿಲ್ಲದೆ ಒಪ್ಪಿಗೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

MADAM SPEAKER.—I will now put the motion to the votes of the House. The question is ;

> "That the respective sums not exceeding the amounts mentioned in the list of Demands be granted to Government to defray the charges which will come in course of payment during the financial year for the period ending 31st day of March 1976 in respect of Demand Nos. 38, 41, 44, and 45."

The motion was adopted and the sums were granted.

As ordered by the Chair the motion for Demands for Gratns adopted by the House are reproducd below :

"That a sum not exceeding Rs. 15.99,16,00C0. be granted to the Government to defray the charges which will come in course of payment during the financial year ending 31st day of March 1976 in respect of Demand No. 38. "Agriculture (Excluding Horticulture)."

"That a sum not exceeding Rs. 2,78,99,000 be granted to the Government to defray to the charges which will come in course of payment during the financial year ending 31st March 1976 in respect of Demand No. 41. "Soil and Water Conservation."

"That a sum not exceeding Rs. 4,66,96,000 be granted to the Government to defray the charges which will come in course of payment during the financial year ending 31st day of March 1976 in respect of Demand No. 44. "Animal Husbandry."

"That a sum not exceeding Rs. 7,10,69,000 be granted to the Government to defray the charges which will come in course of payment during the financial year ending 31st day of March 1976 in respect of Demand No. 45 Dairy Development.

Demands Nos. 39, 49, and 47.

SRI K. T. RATHOD (Minister for Fisheries and Horticulture).—

Madam Speaker.—On recommendation of the Governor, I beg to move.

"That a sum not exceeding Rs. 2 29,12,000 be granted to the Government to defray the charges which will come in course of payment during the financial year ending 31st day of March 1976 in respect of Demand No. 39 'Horticulture'.

"That a sum not exceeding Rs. 1,46, 99 000 be granted to the Government to defray the charges which will come in course of payment during the financial year ending 31st day of March 1976 in respect of Demand No. 46 "Fisheries".

SRI C. N. Patil (Minister for Forests).—Madam Speaker, on the recommendation of the Governor, I beg to move:

"That a sum not exceeding Rs. 10,99,62,000 be granted to the Government to defray the charges which will come in course of payment during the financial year ending 31st day March 1976 in respect of Demand No. 47 "Forest."

MADAM SPEAKER.—Motion moved.

"That a sum not exceeding Rs. 2,29,12 000 be granted to the Government to defray the charges which will come in course of payment during the financial year ending 31s day of March 1976 in respect of Demand No. 39 'Horticulture'.

"That a sum not exceeding Rs. 1.46,99,000 be granted to the Government to defray the charges which will come in course of payment during the financical year ending 31st day of March 1976 in respect of Demand No. 46 "Fisheries".

"That a sum not exceeding Rs.10,99 62,000 be granted the Government to defray the charges which will come in course of payment during the financial year ending 31st day of March 1976, in respect of Demand No. 47 'Forest'.

All the Demands are opened for discussion.

† ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ).—ಸನ್ಮಾನ್ಯ ಅಧ್ಯಕ್ಷಿಣಿಯವರೇ, ಮಾನ್ಯ ಕಾಡಿನ ಮಂತ್ರಿಗಳ ಬೇಡಿಕೆಯನ್ನು ಮತ್ತು ಮಾನ್ಯ ಮೀನು ಮಂತ್ರಿಗಳ ಕೋರಿಕೆಯನ್ನು ನಾನು ವಿರೋಧ ಮಾಡಿ ನಾಲ್ಕು ಮಾತುಗಳನ್ನು ಹೇಳುವುದಕ್ಕೆ ಅಪೇಕ್ಷೆ ಪಡುತ್ತೇನೆ.

ಮೊಟ್ಟಮೊದಲನೆಯದಾಗಿ ನಮ್ಮ ಅರಣ್ಯಸಚಿವರು ಹೊಸದಾಗಿ ಕಾಡುಮಂತ್ರಿಗಳಾದಮೇಲೆ ಈ ಇಲಾಖೆಯ ಬೇಡಿಕೆಯನ್ನು ಮಂಡನ ಮಾಡುತ್ತಿದ್ದಾರೆ. ನಮ್ಮ ಮಲೆನಾಡಿನ ಜನರು ಅರಣ್ಯದ ಬಗ್ಗೆ ಚೆನ್ನಾಗಿ ಬಲ್ಲವರಾಗಿದ್ದಾರೆ. ಆದರೆ ಈ ರಾಜ್ಯದ ದುರಾದೃಷ್ಟವೆಂದರೆ, ಅರಣ್ಯವೆಂದರೆ ಏನು, ಕಾಡು ಎಂದರೆ ಏನು, ಅಲ್ಲಿರುವ ಗಿಡಮರಗಳು ಯಾವುವು, ಅಲ್ಲಿರುವ ಪಶುಪ್ರಾಣಿಪಕ್ಷಿಗಳು ಯಾವುವು ಎನ್ನುವ ಬಗ್ಗೆ ಪರಿಜ್ಞಾನ ಬಗ್ಗೆ ಇಲ್ಲದ ರಾಯಚೂರಿನ ಶ್ರೀ ಸಿ. ಎನ್. ಪಾಟೀಲರು ಇದರ ಮಂತ್ರಿಗಳಾಗಿದ್ದಾರೆ. ಇದು ಒಂದು ದೊಡ್ಡ ವಿಪರ್ಯಾಸ ಮತ್ತು ಅರಣ್ಯದ ಬಗ್ಗೆ ಒಂದು ದೊಡ್ಡ ದುರಂತ ಎಂದು ಹೇಳಬಹುದು. ಅದು ಏನೇ ಇರಲಿ, ಆದರೆ, ಅರಣ್ಯ ಅಥವಾ ಕಾಡು, ಇದರ ಬಗ್ಗೆ ಭಾರತದೇಶ ಮಾತ್ರವಲ್ಲ, ಈ ಭೂಮಿ ಹುಟ್ಟಿದ ಆರಂಭದಿಂದ ಇಂದಿನವರೆಗೂ ಅದಕ್ಕೆ ಒಂದು ದೊಡ್ಡ ಸಂಸ್ಕೃತಿ ಇದೆ. ಅದನ್ನು ತಾವು ಕಾಡಿನ ಸಂಸ್ಕೃತಿ ಎಂದು ಕರೆಯಿರಿ ಅಥವಾ ಅರಣ್ಯ ಸಂಸ್ಕೃತಿ ಎರಿದು ಕರೆಯಿರಿ, ಒಟ್ಟಿನಲ್ಲಿ ಈ ಅರಣ್ಯವು ಮನುಷ್ಯನನ್ನು ಬಹು ಸುಸಂಸ್ಕೃತನನ್ನಾಗಿ ಮಾಡುವುದು; ಈ ಅರಣ್ಯದ ಮೂಲಕ ಸೌಂದರ್ಯ ಸ್ವಾಧನೆಯನ್ನು ಕವಿಗಳು ಸೃಷ್ಟಿ ಮಾಡುವುದಕ್ಕೆ ಅವಕಾಶವಾಗುವಂತಹ ಒಂದು ಒಳ್ಳೆಯ ವಾತಾವರಣ ಇರುತ್ತದೆ. ಪಂಚಕೋಶಗಳಲ್ಲಿ ಅರಣ್ಯ ಕೋಶವೂ ಒಂದು ಎಂಬುದಾಗಿ ಅಜರಾಮರ ಕವಿಗಳಾದ ಕುವೆಂಪು ಅವರು ಹೇಳಿದ್ದಾರೆ.

ಮಲೆಯ ನಾಡದು, ಮಳೆಯ ಬೀಡದು,
ಸಿರಿಯ ಚೆಲುವಿನ ರೂಢದು

ಎಂದು ಆ ಕವಿಗಳು ಹೇಳಿದ್ದಾರೆ. ಕಾಡಿನ ಬಗ್ಗೆ ಉಪಯೋಗಗಳು ಏನೆಂಬುದನು ಬುದ್ಧನ ಕಾಲದಿಂದ ಹಿಡಿದು ಇಂದು ಅಧಿಕಾರ ಗದ್ದುಗೆಯಲ್ಲಿರುವ ಜನರನ್ನು ಒಳಗೊಂಡು ಎಲ್ಲರೂ ತಿಳಿದುಕೊಂಡಿದ್ದಾರೆ. ಯಾರು ಕಾಡನ್ನು ಕಡಿಯುತ್ತಾರೋ ಅವರಿಗೇ ನೆರಳನ್ನು ಕೊಡುವ ಸಂಕೇತವಾಗಿದೆ ಈ ಕಾಡು. ಈ ಕಾಡಿನ ಒಂದು ಔದಾರ್ಯವನ್ನು ಮತ್ತು ಉಪಕಾರವನ್ನು ನೆನಸಿಕೊಳ್ಳದ ಈ ಸರ್ಕಾರ ಕಾಡಿನ ಮರಗಳನ್ನು ಕಡಿಯುವ ವಿಚಾರದಲ್ಲಿ ಪರಮಾವಧಿ ದುರುಪಯೋಗ ಮಾಡಿಕೊಂಡಿದೆ ಎಂಬ ಬಗ್ಗೆ ರುಜುವಾತು ಮಾಡಿಕೊಡುತ್ತೇನೆ. ಸರ್ಕಾರದವರು ಮಾಡಿಕೊಂಡಿರುವ ಒಂದು ಒಪ್ಪಂದದ ಪ್ರಕಾರ ಕಂಟ್ರಾಕ್ಟುದಾರರು ಏನು ಮರಗಳನ್ನು ಕಡಿಯುತ್ತಿದ್ದಾರೆ, ಆ ಒಂದು ದುರಂತವನ್ನು ಆ ಕಡೆಯಿಂದ ಬರುವಂತಹ ನಾವು, ಮತ್ತು ಮಲೆನಾಡಿನ ಜನರು ನೋಡಿದಾಗ ಆ ಬಗ್ಗೆ ನಮಗೆ ಕ್ರೋಧ ಬರುತ್ತದೆ. ಮರಗಳನ್ನು ಕಡಿದು ಲಾರಿಗಳಲ್ಲಿ ಸಾಗಿಸುತ್ತಿರುವ ಚಿತ್ರವನ್ನು ನೋಡಿದಾಗ, ಶವದ ಮೆರವಣಿಗೆ ಹೋಗುವಾಗ ಆ ಶವದ ಸಂಬಂಧೀಕರ ಮನಸ್ಸಿಗೆ ಯಾವ ರೀತಿ ನೋವಾಗುತ್ತಿರುತದೋ ಅದೇ ರೀತಿಯ ನೋವು ಆ

ಭಾಗದಿಂದ ಬರತಕ್ಕಂಥ ನಮಗೆ ಆಗುತ್ತದೆ. ಸರ್ಕಾರದವರು ಮಾತುಮಾತಿಗೆ ಕಾಡನ್ನು ಕಡಿಯಬಾರದೆಂದು ಹೇಳುತ್ತಾರೆ. ಅದನ್ನು ನಾವೂ ಸಹ ಒಪ್ಪುತ್ತೇವೆ. ಆದರೆ ಸರ್ಕಾರದವರೇ ಕಾಡನ್ನು ಕಡಿಯುತ್ತಿರುವುದರಿಂದ ಇಂದು ನಮ್ಮಲ್ಲಿ 33 ಪರ್ಸೆಂಟ್‌ಗೆ ಬದಲು 18 ಪರ್ಸೆಂಟ್ ಮಾತ್ರ ಕಾಡು ಉಳಿದಿದೆ. ಅರಣ್ಯ ಉಳಿಸಬೇಕು ಮತ್ತು ಬೆಳೆಸಬೇಕೆಂಬುದರಲ್ಲಿ ಭಿನ್ನಾಭಿಪ್ರಾಯ ವಿಲ್ಲ; ಆದರೆ ಇಂದು ನಮ್ಮ ಸರ್ಕಾರದವರೇ ದೊಡ್ಡ ದೊಡ್ಡ ಅರಣ್ಯವನ್ನು ಕಡಿಯಲು ಮತ್ತೆ ಬೆಳೆಸುವುದಕ್ಕೆ ಹೊರಟಿದ್ದಾರೆ. ಇದು ಯಾವ ನೀತಿ ಎಂಬುದು ಗೊತ್ತಿಲ್ಲ, ಇಂತಹ ಇವರ ಪಾಲಿಸಿಯನ್ನು ಜನರು ಲಾಲಿಸಿ ಇವರನ್ನೇ ಆರಿಸಿ ಇಲ್ಲಿಗೆ ಅಧಿಕಾರ ನಡೆಸಲು ಕಳುಹಿಸಿಕೊಟ್ಟಿದ್ದಾರೆ. ದಾಂಡೇಲಿ ಕಾಡನ್ನು ಬಿಟ್ಟರೆ, ಅದಕ್ಕೆ ಸರಿಸಮಾನವಾದ ಕಾಡು ಆಗುಂಬೆಯಲ್ಲಿದೆ. ಅದು ನನ್ನ ಕ್ಷೇತ್ರ. ಆ ಕಾಡನ್ನು ಒಂದು ಸಲ ಮಾನ್ಯ ಅಧ್ಯಕ್ಷರು ಸಹ ಬಂದು ನೋಡಿದ್ದಾರೆ. ಆ ಕಾಡಿನೊಳಕ್ಕೆ ಮನುಷ್ಯರು ಇರಲಿ, ಪ್ರಾಣಿಗಳು ಸಹ ಹೋಗುವುದಕ್ಕೆ ಸಾಧ್ಯವಿರಲಿಲ್ಲ; ನಮ್ಮ ಜನರು ಅಂತಹ ಕಾಡನ್ನು ನಾಶ ಮಾಡಿದವರು ನಮ್ಮ ಜನರು ಅಲ್ಲ; ಏನಿದ್ದರು ಅಡಿಗೆ ಮಾಡಲು ಸ್ವಲ್ಪ ಕಟ್ಟಿಗೆ ಉಪಯೋಗಿಸುತ್ತಾರೆ, ಗುಡಿಸಲು ಕಟ್ಟಿಕೊಳ್ಳಲು ಸಣ್ಣ ಸಣ್ಣ ಮರಗಳನ್ನು ಕಡಿಯುತ್ತಾರೆ, ಮಿಕ್ಕಂತೆ ಅವರು ಕಾಡನ್ನು ರಕ್ಷಣೆ ಮಾಡಿಕೊಂಡು ಬಂದಿದ್ದರು. ಆದರೆ ನಮ್ಮ ಸರ್ಕಾರ ಮತ್ತು ಹಿಂದಿನ ಸರ್ಕಾರ ತನ್ನ ಫಾಯಿದೆಗಾಗಿ ಅರಣ್ಯವನ್ನು ಕಡಿಯಲು ಕೆಲವರಿಗೆ ಕಂಟ್ರಾಕ್ಟ್ ಕೊಟ್ಟಿತು. ಅಗ್ರಿಮೆಂಟ್ ಪ್ರಕಾರ ಅವರು ಕಾಡನ್ನು ಕಡಿದು ಮಲೆನಾಡಿನ ಕಾಡನ್ನೆಲ್ಲಾ ಧೂಳಿಪಟ ಮಾಡುತ್ತಿದ್ದಾರೆ. ದಾಂಡೇಲಿಯಲ್ಲಿರುವ ಕಾಡು ಮತ್ತು ಹಳಿಯಾಳ್‌ನಲ್ಲಿರುವ ಕಾಡನ್ನು ಶ್ರೀಮಂತರು ತಮ್ಮ ಕೈಗೆ ತೆಗೆದುಕೊಂಡು, ಕಡಿದು, ಮರಗಳನ್ನು ಮಾರಾಟ ಮಾಡಿ ಇನ್ನೂ ದೊಡ್ಡ ಶ್ರೀಮಂತರಾಗುತ್ತಿದ್ದಾರೆ. ಇದನ್ನು ನೋಡಿದಾಗ ಈ ಸರ್ಕಾರ ಸಮಾಜವಾದದ ಘೋಷಣೆಯನ್ನು ಏನು ಮಾಡಿದೆ, ಅದು ಕೇವಲ ಟೊಳ್ಳು ಎಂಬುದು ಸ್ಪಷ್ಟವಾಗುತ್ತದೆ.

ಅಧ್ಯಕ್ಷರು.—ಮಾನ್ಯ ಸದಸ್ಯರು ಅವರ ಭಾಷಣವನ್ನು ನಾಳೆ ಮುಂದುವರೆಸಬಹುದು. ನಾಳೆ ಪ್ರಶ್ನೋತ್ತರ ಕಾಲ ಇರುವುದಿಲ್ಲ; ಈಗ ಸಭೆ ಮೇಲೆದ್ದು ಪುನಃ ನಾಳೆ ಬೆಳಿಗ್ಗೆ 11 ಗಂಟೆಗೆ ಮತ್ತೆ ಸೇರುತ್ತದೆ.

The Housa adjovrned at Thirty Minutes past Six of the Clock, to meet again at Eleven of the Clock on Thursdy the 20h March 1975.